<u>ಕರ್ನಾಟಕ ವಿಧಾನ ಪರಿಷತ್ತು</u>

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 43 (361)**
**ಸದಸ್ಯರ ಹೆಸರು : ಶ್ರೀ ಎಫ್.ಹೆಚ್.ಜಕ್ಕಪ್ಪನವರ್ (ನಾಮ ನಿರ್ದೇಶಿತ)**
**ಉತ್ತರಿಸುವ ದಿನಾಂಕ : 19.08.2026**
**ಉತ್ತರಿಸುವ ಸಚಿವರು : ಕಂದಾಯ ಸಚಿವರು**

| | **ಪ್ರಶ್ನೆ** | **ಉತ್ತರ** |
|---|---|---|
| (ಅ) | ರಾಜ್ಯದಲ್ಲಿ ಭೂ ಸುಧಾರಣಾ ಮತ್ತು ಭೂ ಹಂಚಿಕೆ ಕಾನೂನು ಜಾರಿಯಾದ ನಂತರ ಎಷ್ಟು ಎಕರೆ ಹೆಚ್ಚುವರಿ ಕೃಷಿ ಭೂಮಿಯನ್ನು ಗುರುತಿಸಲಾಗಿದೆ; ಅದರಲ್ಲಿ ಎಷ್ಟು ಎಕರೆ ಭೂಮಿಯನ್ನು ಭೂ ರಹಿತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮಂಜೂರು ಮಾಡಲಾಗಿದೆ; (ಜಿಲ್ಲೆ ಹಾಗೂ ತಾಲ್ಲೂಕುವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಭೂಸುಧಾರಣೆ ಕಾಯ್ದೆ ಮತ್ತು ಭೂ ಹಂಚಿಕೆ ಕಾನೂನು ಜಾರಿಗೆ ಬಂದನಂತರ, ಹೆಚ್ಚುವರಿ ಎಂದು ಗುರುತಿಸಿದ ಕೃಷಿ ಭೂಮಿಯ ವಿವರಗಳನ್ನು ಹಾಗೂ ಭೂ ನ್ಯಾಯ ಮಂಡಳಿಗಳ ಆದೇಶದ ಮೇರೆಗೆ ಹೆಚ್ಚುವರಿ ಜಮೀನುಗಳನ್ನು ಭೂರಹಿತ ರೈತರಿಗೆ ಹಂಚಿಕೆ ಮಾಡಿರುವ ಹಾಗೂ ಮೂಲ ಮಾಲೀಕರಿಗೆ ಹಿಂತಿರುಗಿಸಿರುವ ಜಮೀನುಗಳ ವಿವರಗಳನ್ನು **ಅನುಬಂಧ-1ರಲ್ಲಿ** ನೀಡಲಾಗಿದೆ. |
| (ಆ) | ಭೂ ರಹಿತರಿಗೆ ಹಂಚಿಕೆ ಮಾಡಲಾದ ಕೃಷಿ ಭೂಮಿಯಲ್ಲಿ ಭೂ ನ್ಯಾಯ ಮಂಡಳಿಗಳ ಆದೇಶದ ಮೇರೆಗೆ ಎಷ್ಟು ಎಕರೆ ಕೃಷಿ ಭೂಮಿಯನ್ನು ಮೂಲ ಮಾಲೀಕರಿಗೆ ಹಿಂತಿರುಗಿಸಲಾಗಿದೆ; (ಜಿಲ್ಲೆ ಮತ್ತು ತಾಲ್ಲೂಕುವಾರು ಮಾಹಿತಿ ಹಾಗೂ ಕಾರಣಗಳನ್ನು ನೀಡುವುದು). | |
| (ಇ) | ರಾಜ್ಯದಲ್ಲಿ ವಿಲೇವಾರಿಯಾಗದೆ ಬಾಕಿ ಉಳಿದಿರುವ ಪಿ.ಟಿ.ಸಿ.ಎಲ್. (PTCL) ಪ್ರಕರಣಗಳು ಎಷ್ಟು; (ಜಿಲ್ಲೆ ಹಾಗೂ ತಾಲ್ಲೂಕುವಾರು ಮಾಹಿತಿ ನೀಡುವುದು) ಅಲ್ಲದೇ, ಪ್ರಕರಣಗಳನ್ನು ಶೀಘ್ರ ವಿಲೇವಾರಿ ಮಾಡಲು ಕಂದಾಯ ಇಲಾಖೆ ಕೈಗೊಂಡಿರುವ ಕ್ರಮಗಳು ಹಾಗೂ ವಿಳಂಬಕ್ಕೆ ಕಾರಣವಾಗಿರುವ ಅಧಿಕಾರಿಗಳ ವಿರುದ್ಧ ಕೈಗೊಂಡಿರುವ ಶಿಸ್ತು ಕ್ರಮಗಳ ವಿವರ ನೀಡುವುದು: | ವಿಚಾರಣೆಗೆ ಬಾಕಿ ಇರುವ ಪಿ.ಟಿ.ಸಿ.ಎಲ್. ಪ್ರಕರಣಗಳ (ಜಿಲ್ಲಾವಾರು ಮತ್ತು ತಾಲ್ಲೂಕುವಾರು) ಮಾಹಿತಿಯನ್ನು **ಅನುಬಂಧ-2ರಲ್ಲಿ** ನೀಡಲಾಗಿದೆ.<br>ಅರೆ ನ್ಯಾಯಿಕ / ಆರ್‌ಆರ್‌ಟಿ ಹಾಗೂ ಪಿ.ಟಿ.ಸಿ.ಎಲ್ ಪ್ರಕರಣಗಳು ಸೇರಿದಂತೆ ಶೀಘ್ರವಿಲೇವಾರಿ / ವಿಚಾರಣೆಕೈಗೊಳ್ಳಲು ಕಂದಾಯ ನ್ಯಾಯಾಲಯ ಪ್ರಕರಣಗಳ ಮೇಲ್ವಿಚಾರಣಾ ವ್ಯವಸ್ಥೆ ಸಂಬಂದ (RCCMS) ತಂತ್ರಾಂಶದ ಮೂಲಕ ನಿರ್ವಹಿಸಲು ಅಧಿಸೂಚನೆ ಆರ್‌ಡಿ 203 ಎಂಆರ್‌ಆರ್ 2023 ದಿನಾಂಕ: 29.08.2025 ಹಾಗೂ ಸುತ್ತೋಲೆ ಸಂಖ್ಯೆ: ಆರ್‌ಡಿ 11 ಟಿಆರ್‌ಎಂ 2019 ದಿನಾಂಕ:21.01.2019 ಹೊರ... ಹಾಗೂ ಭೂ ಕಂದಾಯ ನಿಯ... ನಿಯಮ 16-ಎ ಸೇರ್ಪಡೆಗೊಳಿ... ಬಳಕೆಗೆ ಅವಕಾಶ ಕಲ್ಪಿಸಲಾಗಿ... |

| | | |
|---|---|---|
| (ಈ) | ಸರ್ಕಾರಿ ಜಮೀನನ್ನು ಮೂರು-ನಾಲ್ಕು ದಶಕಗಳಿಂದ ಸಾಗುವಳಿ ಮಾಡಿಕೊಂಡು ಬರುತ್ತಿರುವ ದಲಿತ ಹಾಗೂ ಇತರ ಭೂ-ರಹಿತ ಕುಟುಂಬಗಳಿಗೆ ಇನ್ನೂ ಭೂಮಿ ಮಂಜೂರು ಮಾಡದಿರಲು ಕಾರಣವೇನು; ಅವರಿಗೆ ಭೂಮಿ ಮಂಜೂರು ಮಾಡುವ ಕುರಿತು ಸರ್ಕಾರದ ಪ್ರಸ್ತುತ ನೀತಿ ಹಾಗೂ ಕಾರ್ಯಯೋಜನೆಗಳೇನು; | ಸರ್ಕಾರಿ ಜಮೀನುಗಳಲ್ಲಿ ಸಾಗುವಳಿ ಮಾಡುತ್ತಿರುವ ರೈತರಿಗೆ ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸುವ ಸಲುವಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಕಲಂ 94-ಎ, 94-ಬಿ, 94-ಎ(4)ರಡಿ ಕ್ರಮವಾಗಿ ನಮೂನೆ-50, 53 ಮತ್ತು 57ರಡಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.<br><br>ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಕಲಂ 94-ಎ, 94-ಬಿ, 94-ಎ(4)ರಡಿ ಕ್ರಮವಾಗಿ ನಮೂನೆ-50, 53 ಮತ್ತು 57ರಡಿ ಸ್ವೀಕೃತವಾಗಿರುವ ಅರ್ಜಿಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸುವ ಕುರಿತು ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ 45 ಎಲ್‌ಜಿಪಿ 2023 ದಿನಾಂಕ: 01.12.2023ರಲ್ಲಿ ವಿವರವಾದ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ. **(ಅನುಬಂಧ-3 ರಲ್ಲಿ** ನೀಡಲಾಗಿದೆ) ಸಂಕ್ಷಿಪ್ತ ವಿವರ ಈ ಕೆಳಗಿನಂತಿದೆ.<br><br>1. ಬಾಕಿ ಇರುವ ನಮೂನೆ -50, 53 ಮತ್ತು 57ರ ಅರ್ಜಿಗಳನ್ನು ವಿಲೇವಾರಿ ಮಾಡುವಾಗ ಕ್ರಮವಾಗಿ ಮೊದಲು ನಮೂನೆ-50ರಲ್ಲಿ ಸ್ವೀಕರಿಸಿದ ಅರ್ಜಿಗಳನ್ನು ನಂತರ ನಮೂನೆ-53ರಲ್ಲಿ ಸ್ವೀಕರಿಸಿದ ಅರ್ಜಿಗಳನ್ನು ಹಾಗೂ ತದ ನಂತರದಲ್ಲಿ ನಮೂನೆ-57ರಲ್ಲಿ ಸ್ವೀಕರಿಸಿದ ಅರ್ಜಿಗಳನ್ನು ಹಿರಿತನದ ಆಧಾರದ ಮೇಲೆ ವಿಲೇವಾರಿ ಮಾಡುವುದು<br><br>2. ಬಾಕಿ ಇರುವ ಅರ್ಜಿಗಳನ್ನು ಕಡ್ಡಾಯವಾಗಿ ಬಗರ್‌ಹುಕುಂ ತಂತ್ರಾಂಶದಲ್ಲಿ ಇಂಧೀಕರಿಸಿದ ನಂತರ ಅರ್ಜಿಗಳನ್ನು ಇತ್ಯರ್ಥಪಡಿಸಲು ತಹಶೀಲ್ದಾರ್ ರವರು ಬಗರ್‌ಹುಕುಂ ತಂತ್ರಾಂಶದಲ್ಲಿಯೇ ಕ್ರಮವಹಿಸುವುದು.<br><br>3. ತಹಶೀಲ್ದಾರರು ಅರ್ಜಿಗಳನ್ನು ಪರಿಶೀಲಿಸಿದ ನಂತರ ಅನರ್ಹ ಅರ್ಜಿಗಳನ್ನು ಜಿಲ್ಲಾಧಿಕಾರಿಗಳಿಗೆ ವಿಲೇಗೊಳಿಸಲು ಸಲ್ಲಿಸುವುದು. ಜಿಲ್ಲಾಧಿಕಾರಿಯು ಅನರ್ಹ ಅರ್ಜಿಗಳನ್ನು ಒಂದು ತಿಂಗಳೊಳಗಾಗಿ ತಿರಸ್ಕರಿಸುವುದು ಹಾಗೂ ಅರ್ಹ ಅರ್ಜಿಗಳನ್ನು ಮಾತ್ರ ಸಮಿತಿಯ ಮುಂದೆ ಮಂಡಿಸಲು ಕ್ರಮವಹಿಸುವುದು. |

4. ನಮೂನೆ-50, 53 ಮತ್ತು 57ರಲ್ಲಿ ಸ್ವೀಕರಿಸಿದ ಅರ್ಜಿಗಳನ್ನು ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂ ದಾಖಲೆಗಳ ಉಪ ನಿರ್ದೇಶಕರು, ಬಗರ್‌ಹುಕುಂ ಅರ್ಹ ಅರ್ಜಿಗಳ ಕಡತ ತಯಾರಿಸಲು ಪ್ರತ್ಯೇಕವಾಗಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಇಬ್ಬರು ಸರ್ಕಾರಿ ಮೋಜಣಿದಾರರನ್ನು ಕಡ್ಡಾಯವಾಗಿ ನಿಯೋಜಿಸಿ, ಕಂದಾಯ ಮತ್ತು ಸರ್ವೆ ಇಲಾಖೆಯ ಅಧಿಕಾರಿಗಳು ಸ್ಥಳ ತನಿಖೆ ಮಾಡುವಾಗ ಅನಧಿಕೃತ ಸಾಗುವಳಿದಾರರ ಆಧಾರ್ e-KYC ಕಡ್ಡಾಯವಾಗಿ ಮಾಡುವುದು.
5. ಸದರಿ ಜಮೀನಿನ ವಿಸ್ತೀರ್ಣ ಮತ್ತು ಗಡಿಯನ್ನು ಬಗರ್‌ಹುಕುಂ ಮೊಬೈಲ್ ಆಪ್ ಮೂಲಕ Geo Fencing ಮಾಡುವುದು.
6. ಸ್ಥಳ ತನಿಖೆ ಸಮಯದಲ್ಲಿ ಅರ್ಜಿದಾರರ ಪಡಿತರ ಚೀಟಿ, ಆಧಾರ ಸಂಖ್ಯೆ, ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಮೊಬೈಲ್ ಆಪ್‌ನಲ್ಲಿ ನಮೂದಿಸುವುದು.
7. ಸ್ಥಳ ಪರಿಶೀಲನಾ ವರದಿ, ನಕ್ಷೆ, ಮಹಜರ್ ವರದಿಯನ್ನು ಗ್ರಾಮ ಆಡಳಿತಾಧಿಕಾರಿ ಹಾಗೂ ಕಂದಾಯ ನಿರೀಕ್ಷಕರು, ಸರ್ವೆ ಇಲಾಖೆಗೆ ಹಾಗೂ ತಹಶೀಲ್ದಾರರಿಗೆ ಏಕ ಕಾಲದಲ್ಲಿ ತಂತ್ರಾಂಶದಲ್ಲಿ ಸಲ್ಲಿಸುವುದು.
8. ತಹಶೀಲ್ದಾರ್ ರವರು ಅರ್ಜಿದಾರರ ಪಡಿತರ ಚೀಟಿ, ಆಧಾರ ಸಂಖ್ಯೆ, ಚುನಾವಣೆ ಗುರುತಿನ ಚೀಟಿ, ಜಾತಿ ಹಾಗೂ ಆದಾಯ ಪ್ರಮಾಣ ಪತ್ರ, ವಾಸಸ್ಥಳ ದೃಢೀಕರಣ ಪತ್ರ, ರಾಜಸ್ವ ನಿರೀಕ್ಷಕರು/ ಶಿರಸ್ತೇದಾರರ ವರದಿ Karnataka State Remote Sensing Application Centre (KSRSAC) ನಿಂದ ಉಪಗ್ರಹ ಆಧಾರಿತ ಚಿತ್ರ ಪರಿಗಣಿಸಿ, ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ತಮ್ಮ ಸ್ಪಷ್ಟ ಅಭಿಪ್ರಾಯ ದಾಖಲಿಸುವುದು.
9. ಅರ್ಜಿಗಳನ್ನು ಇತ್ಯರ್ಥಪಡಿಸುವಾಗ Karnataka State Remote Sensing Application Centre (KSRSAC) ನಿಂದ ಉಪಗ್ರಹ ಆಧಾರಿತ ಚಿತ್ರ ಪರಿಗಣಿಸುವುದು.

| | | |
|---|---|---|
| | | 10. ಸಮಿತಿಯು ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 108-ಎಫ್ ರಡಿ ಮಂಜೂರಾತಿಗೆ ಇರುವ ಅರ್ಹತೆಯನ್ನು ಪರಿಶೀಲಿಸುವುದು.<br>11. ಸಮಿತಿ ಅಥವಾ ಹೆಚ್ಚುವರಿ ಸಮಿತಿಯು ಪ್ರಸ್ತಾವನೆಯನ್ನು ಪರಿಶೀಲಿಸಿ, ವಿಚಾರಣೆಗೆ ಒಳಪಡಿಸಿದ ನಂತರ ಹಕ್ಕನ್ನು ಹೊಂದಿರುವ ಅರ್ಜಿದಾರರಿಗೆ ಅರ್ಹವಾದ ಭೂಮಿಯನ್ನು ಮಂಜೂರು ಮಾಡಲು ಶಿಫಾರಸ್ಸು ಮಾಡುವುದು ಅಥವಾ ವಜಾಗೊಳಿಸುವುದು.<br>12. ಸಕ್ರಮಾತಿಗೊಳಿಸಿದ್ದಲ್ಲಿ ಸರ್ವೆ ಇಲಾಖೆಯವರು ಜಮೀನಿಗೆ ಸಂಬಂಧಿಸಿದಂತೆ ಎಲ್ಲಾ ಪೋಡಿ/ದುರಸ್ಥಿ ಪ್ರಕ್ರಿಯೆಯನ್ನು ಒಂದು ವಾರದೊಳಗೆ ಪೂರ್ಣಗೊಳಿಸಿ ಹೊಸ ಸರ್ವೆ ನಂಬರ್‌ನ್ನು ನೀಡುವುದು.<br>13. ತಹಶೀಲ್ದಾರ್ ರವರು Bar Coded ಇ-ಸಾಗುವಳಿ ಚೀಟಿಯನ್ನು ನೀಡುವುದು ಮತ್ತು ಒಂದು ವಾರದೊಳಗಾಗಿ ಉಪನೋಂದಣಾಧಿಕಾರಿ ಕಛೇರಿಯಲ್ಲಿ ನೋಂದಣಿ ಮಾಡುವುದು ಹಾಗೂ ಕಂದಾಯ ದಾಖಲೆಗಳಲ್ಲಿ ಒಂದು ವಾರದೊಳಗಾಗಿ ಸೂಕ್ತ ನಮೂದು ಮಾಡುವುದು. |
| **(ಊ)** | ಫಾರ್ಮ್-57 ಮತ್ತು ಫಾರ್ಮ್-59 ಅಡಿಯಲ್ಲಿ ಸಲ್ಲಿಸಲಾದ ಅರ್ಜಿಗಳಲ್ಲಿ ಸೂಕ್ತ ಕಾರಣವಿಲ್ಲದೆ ತಿರಸ್ಕರಿಸಲಾದ ಪ್ರಕರಣಗಳು ಎಷ್ಟು; (ಜಿಲ್ಲೆ ಹಾಗೂ ತಾಲ್ಲೂಕುವಾರು ಮಾಹಿತಿ ನೀಡುವುದು) ಅಂತಹ ಅರ್ಜಿಗಳನ್ನು ಮರು ಪರಿಶೀಲಿಸಿ ಅರ್ಹ ಫಲಾನುಭವಿಗಳಿಗೆ ನ್ಯಾಯ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಇಂತಹ ಪ್ರಕರಣಗಳು ಯಾವುದೂ ಇರುವುದಿಲ್ಲ. |

**ಕಂಇ 23 ಎಲ್‌ಆರ್‌ಎಸ್ 2026**

**[ಡಾ|| ಜಿ. ಪರಮೇಶ್ವರ]**
**ಉಪ ಮುಖ್ಯಮಂತ್ರಿ**

## ಅನುಬಂಧ - 1

| ಕ್ರ. ಸಂ | ಜಿಲ್ಲೆ | ತಾಲ್ಲೂಕು ಭೂ ನ್ಯಾಯಮಂಡಳಿ ಅಧಿಕಾರ ವ್ಯಾಪ್ತಿ | ಹೆಚ್ಚುವರಿ ಎಂದು ಘೋಷಿಸಿರುವ ಜಮೀನಿನ ವಿವರ | ಹೆಚ್ಚುವರಿ ಎಂದು ಘೋಷಿಸಿದ ಜಮೀನು ಹಂಚಿಕೆ ವಿವರ SC | ST | OTHERS | ನ್ಯಾಯಾಲಯದ ಆದೇಶದಂತೆ ಭೂ ರಹಿತರಿಗೆ ಹಂಚಿಕೆ ಮಾಡಿದ ಜಮೀನುಗಳನ್ನು ಮೂಲ ಮಾಲೀಕರಿಗೆ ಹಿಂತಿರುಗಿಸಿರುವ ವಿಸ್ತೀರ್ಣದ ವಿವರ | ಷರಾ |
|---|---|---|---|---|---|---|---|---|
| | | | ಎಕರೆ/ಗುಂಟೆ | ಎಕರೆ/ಗುಂಟೆ | ಎಕರೆ/ಗುಂಟೆ | ಎಕರೆ/ಗುಂಟೆ | ಎಕರೆ/ಗುಂಟೆ | |
| 1 | ಬೆಂಗಳೂರು ಗ್ರಾಮಾಂತರ | ದೊಡ್ಡಬಳ್ಳಾಪುರ | 44-29 | 26-26 | 0 | 15-32 | 42-18 | - |
| | | ದೇವನಹಳ್ಳಿ | 0 | 0 | 0 | 0 | 0 | - |
| | | ಹೊಸಕೋಟೆ | 0 | 0 | 0 | 0 | 0 | |
| | | ನೆಲಮಂಗಲ | 0 | 0 | 0 | 0 | 0 | |
| 2 | ಬೆಂಗಳೂರು ನಗರ | ಬೆಂಗಳೂರು ಪೂರ್ವ ತಾಲ್ಲೂಕು | 0 | 0 | 0 | 0 | 0 | - |
| | | ಯಲಹಂಕ | 0 | 0 | 0 | 0 | 0 | |
| 3 | ಚಿಕ್ಕಬಳ್ಳಾಪುರ | ಬಾಗೇಪಲ್ಲಿ | 0 | 0 | 0 | 0 | 0 | - |
| | | ಗೌರಿಬಿದನೂರು | 0 | 0 | 0 | 0 | 0 | |
| | | ಮಂಚೇನಹಳ್ಳಿ | 0 | 0 | 0 | 0 | 0 | |
| | | ಚೇಳೂರು | 0 | 0 | 0 | 0 | 0 | |
| | | ಗುಡಿಬಂಡೆ | 0 | 0 | 0 | 0 | 0 | |
| | | ಚಿಕ್ಕಬಳ್ಳಾಪುರ | 0 | 0 | 0 | 0 | 0 | |
| | | ಶಿಡ್ಲಘಟ್ಟ | 0 | 0 | 0 | 0 | 0 | |
| | | ಚಿಂತಾಮಣಿ | 0 | 0 | 0 | 0 | 0 | |
| 4 | ಚಿತ್ರದುರ್ಗ | ಚಿತ್ರದುರ್ಗ | 239.37 | 40.16 | 0 | 0 | 0 | - |
| | | ಚಳ್ಳಕೆರೆ | 905.26 | 249.02 | 0 | 0 | 512.3 | - |
| | | ಹೊಳಲ್ಕೆರೆ | 125.36 | 51.28 | 40.24 | 33.24 | 1130.28 | - |
| | | ಹೊರಿೊಸದುರ್ಗ | 71.25 | 49.16 | 0 | 0 | 834.36 | - |
| | | ಹಿರಿಯೂರು | 71.08 | 60 | 0 | 0 | 658.08 | - |
| | | ಮೊಳಕಾಲ್ಮೂರು | 45.16 | 33.24 | 0 | 0 | 0 | - |

| | | | | | | | | |
|---|---|---|---|---|---|---|---|---|
| 5 | ದಾವಣಗೆರೆ | ಚನ್ನಗಿರಿ | 0 | 0 | 0 | 0 | 0 | - |
| | | ದಾವಣಗೆರೆ | 0 | 0 | 0 | 0 | 0 | |
| | | ಹೊನ್ನಾಳಿ | 0 | 0 | 0 | 0 | 0 | |
| | | ಜಗಳೂರು | 0 | 0 | 0 | 0 | 0 | |
| | | ನ್ಯಾಮತಿ | 0 | 0 | 0 | 0 | 0 | |
| | | ಹರಿಹರ | 0 | 0 | 0 | 0 | 0 | |
| 6 | ಕೋಲಾರ | ಕೋಲಾರ | 0 | 0 | 0 | 0 | 0 | - |
| | | ಮಾಲೂರು | 0 | 0 | 0 | 0 | 0 | |
| | | ಶ್ರೀನಿವಾಸಪುರ | 0 | 0 | 0 | 0 | 0 | |
| | | ಬಂಗಾರಪೇಟೆ | 0 | 0 | 0 | 0 | 0 | |
| | | ಮುಳಬಾಗಿಲು | 0 | 0 | 0 | 0 | 0 | |
| | | ಕೆ ಜಿ ಎಫ್ | 0 | 0 | 0 | 0 | 0 | |
| 7 | ಬೆಂಗಳೂರು ದಕ್ಷಿಣ | ರಾಮನಗರ | 0 | 0 | 0 | 0 | 0 | - |
| | | ಚನ್ನಪಟ್ಟಣ | 0 | 0 | 0 | 0 | 0 | |
| | | ಕನಕಪುರ | 0 | 0 | 0 | 0 | 0 | |
| | | ಮಾಗಡಿ | 0 | 0 | 0 | 0 | 0 | |
| | | ಹಾರೋಹಳ್ಳಿ | 0 | 0 | 0 | 0 | 0 | |
| 8 | ಶಿವಮೊಗ್ಗ | ಹೊಸನಗರ | 140-16 | 140-16 | 0 | 0 | 0 | - |
| | | ಶಿಕಾರಿಪುರ | 416.1/2 | 154.37 | 11 | 102.38 | 0 | |
| | | ಭದ್ರಾವತಿ | 117-04 | 2-00 | 2-00 | 2-00 | 0 | |
| | | ತೀರ್ಥಹಳ್ಳಿ | 459-15 | 77 | 5 | 60 | 0 | |

| | | | | | | | | |
|---|---|---|---|---|---|---|---|---|
| 9 | ತುಮಕೂರು | ತುಮಕೂರು | | 11-02 | 19-09 | | 25-24 | - |
| | | ಗುಬ್ಬಿ | 0 | 0 | 0 | 0 | 0 | - |
| | | ಕುಣಿಗಲ್ | 0 | 0 | 0 | 0 | 0 | |
| | | ಮಧುಗಿರಿ | 0 | 0 | 0 | 0 | 0 | |
| | | ಶಿರಾ | 0 | 0 | 0 | 0 | 0 | |
| | | ಪಾವಗಡ | 2134-13 | 282-30 | 185-13 | 279-12 | 0 | |
| | | ಕೊರಟಗೆರೆ | 0 | 0 | 0 | 0 | 0 | |
| | | ತಿಪಟೂರು | 12-30 | 2-15 | 4-00 | 6-15 | 0 | |
| | | ತುರುವೇಕೆರೆ | 0 | 1363-23 | 142-10 | 0 | 0 | |
| | | ಚಿಕ್ಕನಾಯಕನಹಳ್ಳಿ | 0 | 0 | 0 | 0 | 0 | |
| 10 | ಚಾಮರಾಜನಗರ | ಚಾಮರಾಜನಗರ | 0 | 0 | 0 | 0 | 0 | - |
| | | ಕೊಳ್ಳೇಗಾಲ | 0 | 0 | 0 | 0 | 0 | |
| | | ಗುಂಡ್ಲುಪೇಟೆ | 348.03 | 9.35 | 0 | 1.31 | 0 | 336.17 ಎಕರೆ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾಯಿಸಲಾಗಿರುತ್ತದೆ. |
| | | ಯಳಂದೂರು | 0 | 0 | 0 | 0 | 0 | - |
| 11 | ಚಿಕ್ಕಮಗಳೂರು | ತರೀಕೆರೆ | ಯಾವುದು ಇರುವುದಿಲ್ಲ | ಇಲ್ಲ | ಇಲ್ಲ | ಇಲ್ಲ | 0 | - |
| | | ಚಿಕ್ಕಮಗಳೂರು | 175-00 | 118.36 | 7.22 | 41.28 | 0 | - |
| | | ಮೂಡಿಗೆರೆ | 0 | 0 | 0 | 0 | 0 | - |
| | | ಅಜ್ಜಂಪುರ | ಯಾವುದು ಇರುವುದಿಲ್ಲ | ಇಲ್ಲ | ಇಲ್ಲ | ಇಲ್ಲ | 0 | |
| | | ನರಸಿಂಹರಾಜಪುರ | 0 | 0 | 0 | 0 | 0 | |
| | | ಕಳಸ | 0 | 0 | 0 | 0 | 0 | |
| | | ಶೃಂಗೇರಿ | ಯಾವುದು ಇರುವುದಿಲ್ಲ | ಇಲ್ಲ | ಇಲ್ಲ | ಇಲ್ಲ | 0 | |
| | | ಕೊಪ್ಪ | ಯಾವುದು ಇರುವುದಿಲ್ಲ | ಇಲ್ಲ | ಇಲ್ಲ | ಇಲ್ಲ | 0 | |
| | | ಕಡೂರು | ಯಾವುದು ಇರುವುದಿಲ್ಲ | ಇಲ್ಲ | ಇಲ್ಲ | ಇಲ್ಲ | 0 | |

| | | | | | | | | |
|---|---|---|---|---|---|---|---|---|
| 12 | ದಕ್ಷಿಣ ಕನ್ನಡ | ಮಂಗಳೂರು | ಯಾವುದೇ ಪ್ರಕರಣ ಇರುವುದಿಲ್ಲ | | | | | |
| | | ಉಳ್ಳಾಲ | ಯಾವುದೇ ಪ್ರಕರಣ ಇರುವುದಿಲ್ಲ | | | | | |
| | | ಮೂಡುಬಿದಿರೆ | ಯಾವುದೇ ಪ್ರಕರಣ ಇರುವುದಿಲ್ಲ | | | | | |
| | | ಮೂಲ್ಕಿ | ಯಾವುದೇ ಪ್ರಕರಣ ಇರುವುದಿಲ್ಲ | | | | | |
| | | ಸುಳ್ಯ | ಯಾವುದೇ ಪ್ರಕರಣ ಇರುವುದಿಲ್ಲ | | | | | |
| | | ಕಡಬ | ಯಾವುದೇ ಪ್ರಕರಣ ಇರುವುದಿಲ್ಲ | | | | | |
| | | ಬಂಟ್ವಾಳ ತಾಲೂಕು | 5.50 | 2.70 | 2.70 | 0 | 0 | 0.10 ಎಕ್ರೆಯನ್ನು ದಾರಿಗಾಗಿ ಮೀಸಲಿಡಲಾಗಿದೆ |
| | | ಬೆಳ್ತಂಗಡಿ | ನೆರಿಯ ಗ್ರಾಮದ ಸ.ನಂ 146/ ರ ಪೈಕಿ ಯಲ್ಲಿ 3015.48 ಎಕ್ರೆ ಮತ್ತು 8983.52 ಎಕ್ರೆ ಜಮೀನುಗಳನ್ನು ಹೆಚ್ಚುವರಿ ಜಮೀನುಗಳೆಂದು ಘೋಷಿಸಲಾಗಿದ್ದು, ಸದ್ರಿ ಜಮೀನುಗಳಿಗೆ ಸಂಬಂಧಿಸಿದಂತೆ ಕ್ರಮವಾಗಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ WA 43/2025 ಮತ್ತು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ SLP (C) DAIRY NO. 26019/2025 ರಂತೆ ಪ್ರಕರಣ ದಾಖಲಾಗಿ ತನಿಖಾ ಹಂತದಲ್ಲಿರುತ್ತದೆ. | | | | | |
| | | ಪುತ್ತೂರು | 9.45 | 5.65 | 4.10 | 0 | 0 | - |
| 13 | ಹಾಸನ | ಆಲೂರು | 117-32 | 117.32 | 0 | 0 | 0 | - |
| | | ಸಕಲೇಶಪುರ | 0 | 0 | 0 | 0 | 0 | - |
| | | ಬೇಲೂರು | 0 | 0 | 0 | 0 | 0 | |
| | | ಅರಕಲಗೂಡು | 0 | 0 | 0 | 0 | 0 | |
| | | ಹಾಸನ | 0 | 0 | 0 | 0 | 0 | |
| | | ಅರಸೀಕೆರೆ | 0 | 0 | 0 | 0 | 0 | |
| | | ಹೊಳೆನರಸೀಪುರ | 0 | 0 | 0 | 0 | 0 | |
| | | ಚನ್ನರಾಯಪಟ್ಟಣ | 0 | 0 | 0 | 0 | 0 | |

| | | | | | | | | |
|---|---|---|---|---|---|---|---|---|
| 14 | ಕೊಡಗು | ಸೋಮವಾರಪೇಟೆ | 0 | 0 | 0 | 0 | 0 | - |
| | | ಪೊನ್ನಂಪೇಟೆ | 0 | 0 | 0 | 0 | 0 | |
| | | ಮಡಿಕೇರಿ | 1.30 | 0.30 | 0 | 1.00 | 0 | - |
| | | ಕುಶಾಲನಗರ | 185.60 | 0 | 0 | 9.00 | 0 | - |
| | | ವಿರಾಜಪೇಟೆ | 1.26 | 0 | 1.26 | 0 | 0 | - |
| 15 | ಮಂಡ್ಯ | ಮಂಡ್ಯ | 510.21 | 72.18 | 5.25 | 462.18 | 0 | - |
| | | ಮದ್ದೂರು | 0 | 0 | 0 | 0 | 0 | - |
| | | ಮಳವಳ್ಳಿ | 806.38.08 | 83.06 | 9.14 | 715.38.08 | 0 | - |
| | | ಪಾಂಡವಪುರ | 0 | 0 | 0 | 0 | 0 | - |
| | | ಶ್ರೀರಂಗಪಟ್ಟಣ | 0 | 0 | 0 | 0 | 0 | - |
| | | ಕೆ.ಆರ್ ಪೇಟೆ | 0 | 0 | 0 | 0 | 0 | - |
| | | ನಾಗಮಂಗಲ | 0 | 0 | 0 | 0 | 0 | - |
| 16 | ಮೈಸೂರು | ಮೈಸೂರು | 0 | 0 | 0 | 0 | 0 | - |
| | | ನಂಜನಗೂಡು | 891-1 | 5-35 | 6-25 | 13-05 | 486 | ಉಳಿಕೆ 379-16 ಕೆ ಐ ಎ ಡಿ ಬಿ ಗೆ ಭೂಸ್ವಾಧೀನವಾಗಿರುತ್ತದೆ |
| | | ಟಿ ನರಸೀಪುರ | 0 | 0 | 0 | 0 | 0 | - |
| | | ಹುಣಸೂರು | 60-11 | 24-18 | 8-29 | 27-04 | 0 | - |
| | | ಪಿರಿಯಾಪಟ್ಟಣ | 0 | 0 | 0 | 0 | 0 | ಯಾವುದೇ ಪ್ರಕರಣಗಳು ಕಂಡುಬಂದಿರುವುದಿಲ್ಲ. |
| | | ಕೆ ಆರ್ ನಗರ | 0 | 0 | 0 | 0 | 0 | |
| | | ಹೆಚ್ ಡಿ ಕೋಟೆ | 0 | 0 | 0 | 0 | 0 | |
| | | ಸಾಲಿಗ್ರಾಮ | 0 | 0 | 0 | 0 | 0 | |
| | | ಸರಗೂರು | 0 | 0 | 0 | 0 | 0 | |

| | | | | | | | | |
|---|---|---|---|---|---|---|---|---|
| 17 | ಉಡುಪಿ | ಉಡುಪಿ | 0 | 0 | 0 | 0 | 0 | ಯಾವುದೇ ಪ್ರಕರಣಗಳು ಕಂಡುಬಂದಿರುವುದಿಲ್ಲ. |
| | | ಕುಂದಾಪುರ | 0 | 0 | 0 | 0 | 0 | |
| | | ಬ್ರಹ್ಮಾವರ | 0 | 0 | 0 | 0 | 0 | |
| | | ಕಾರ್ಕಳ | 1908.09 | 9.14 | 1.09 | 10.15 | 0 | ಕಾರ್ಕಳ ತಾಲ್ಲೂಕಿನಲ್ಲಿ 06 ಪ್ರಕರಣಗಳಲ್ಲಿ 1908.09 ಎಕರೆ ಹೆಚ್ಚುವರಿ ಜಮೀನೆಂದು ತೀರ್ಮಾನಿಸಲಾಗಿದ್ದು, ಈ ಪೈಕಿ 02 ಪ್ರಕರಣಗಳಲ್ಲಿ 1887.11 ಎಕರೆ ಜಮೀನಿಗೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದಂತೆ ಈ ಪ್ರಕರಣಗಳು ತನಿಖೆ ಹಂತದಲ್ಲಿದ್ದು, ಉಳಿಕೆ 04 ಪ್ರಕರಣಗಳಲ್ಲಿ 20.38 ಎಕರೆ ಜಮೀನನ್ನು ಅರ್ಹ ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ. |
| | | ಬೈಂದೂರು | 407.36 | 4.42 | 40.91 | 362.03 | 0 | ಬೈಂದೂರು ತಾಲೂಕಿನಲ್ಲಿ ಭೂಸುಧಾರಣಾ ಕಾನೂನು ಜಾರಿಯಾದ ನಂತರ 407.36 ಎಕರೆ ಹೆಚ್ಚುವರಿ ಕೃಷಿ ಜಮೀನು ಗುರುತಿಸಲಾಗಿರುತ್ತದೆ. ಇದರಲ್ಲಿ ಪರಿಶಿಷ್ಟ ಜಾತಿಯ ಒಂದು ಪ್ರಕರಣ ಒಟ್ಟು 4.42 ಎಕರೆ ಹಾಗೂ ಪರಿಶಿಷ್ಟ ಪಂಗಡದ 8 ಜನರಿಗೆ ಒಟ್ಟು 40.91 ಎಕರೆ ಜಮೀನು ಮಂಜೂರು ಮಾಡಲಾಗಿದೆ. ಅರಣ್ಯ ಇಲಾಖೆಗೆ 362.03 ಎಕರೆ ಮಂಜೂರು ಮಾಡಲಾಗಿರುತ್ತದೆ. |
| | | ಹೆಬ್ರಿ | 0 | 0 | 0 | 0 | 0 | - |
| | | ಕಾಪು | 0 | 0 | 0 | 0 | 0 | |

| | | | | | | | | |
|---|---|---|---|---|---|---|---|---|
| 18 | ಬಾಗಲಕೋಟೆ | ರಬಕವಿ-ಬನಹಟ್ಟಿ | 0 | 0 | 0 | 0 | 0 | - |
| | | ತೆರದಾಳ | 0 | 0 | 0 | 0 | 0 | |
| | | ಜಮಖಂಡಿ | 1802-01 | 543-20 | 0 | 470-31 | 0 | - |
| | | ಬೀಳಗಿ | 1477-17 | 548-28 | 316-22 | 612-17 | 0 | - |
| | | ಮುಧೋಳ | 47.27 | 0 | 0 | 0 | | ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಮುಧೋಳ ತಾಲೂಕಿನ ಒಟ್ಟು 47-27 ಎ/ಗುಂ ಜಮೀನಿಗೆ ಸಂಬಂಧಿಸಿದಂತೆ ಒಟ್ಟು2 ಪ್ರಕರಣಗಳು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ಸಂಖ್ಯೆ-WP-65147-2011 ಮತ್ತು WA-100269/2017 ವಿಚಾರಣೆ ಹಂತದಲ್ಲಿ ಬಾಕಿ ಇರುತ್ತದೆ |
| | | ಬಾದಾಮಿ | 2913-20 | 982-08 | - | 697-22 | -- | ಬಾಕಿ ಉಳಿದ ಕ್ಷೇತ್ರ 1233 ಎ-30ಗುಂ ಹಂಚಿಕೆಯಾಗಿದೇ ಸರ್ಕಾರದ ವಶದಲ್ಲಿ ಇರುತ್ತದೆ. |
| | | ಬಾಗಲಕೋಟೆ | 2140-05 | 199-04 | - | 128-30 | | Reserved transferred for public purpose 1806A-06GU Area in court under litigation 06A-11GU |
| | | ಗುಳೇದಗುಡ್ಡ | 0 | 0 | 0 | 0 | 0 | - |
| | | ಹುನಗುಂದ | 157-16 | 77-00 | 0 | 80-16 | 0 | - |
| | | ಇಳಕಲ್ಲ | 451-37 | 407-13 | 44-24 | 84-07 | 0 | ಕ್ಷೇತ್ರ 15-05ಎ/ಗು ಈ ಜಮೀನಿಗೆ ಮಾನ್ಯ ಉಚ್ಚನ್ಯಾಯಾಲಯ ಧಾರವಾಡ ಇವರಲ್ಲಿ ಪ್ರಕರಣ ಬಾಕಿ ಇರುತ್ತದೆ. |

| | | | | | | | | |
|---|---|---|---|---|---|---|---|---|
| 19 | ಬೆಳಗಾವಿ | ರಾಯಬಾಗ | 1433ಎ-18ಗುಂ | 378ಎ-00ಗುಂ | 0 | 215ಎ-00ಗುಂ | 0 | - |
| | | ಹುಕ್ಕೇರಿ | 3143ಎ-28ಗುಂ | - | - | - | - | ಸದರಿ ಜಮೀನುಗಳ ಕುರಿತು ಪ್ರಕರಣ ಸಂಖ್ಯೆ ಡಬ್ಲ್ಯೂಪಿ ನಂ.105441/2023 ರ ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ಇಲ್ಲಿ ವಿಚಾರಣೆ ಹಂತದಲ್ಲಿ ಬಾಕಿ ಇರುತ್ತದೆ. |
| | | ಬೈಲಹೊಂಗಲ | 131ಎ-00ಗುಂ | 84ಎ-00ಗುಂ | 33ಎ-00ಗುಂ | 14ಎ-00ಗುಂ | 0 | - |
| | | ಚಿಕ್ಕೋಡಿ (ನಿಪ್ಪಾಣಿ ತಾಲೂಕು ಒಳಗೊಂಡಂತೆ) | 804ಎ-07ಗು | 106ಎ-0ಗು | 03ಎ-0ಗು | 42ಎ-0ಗು | - | - |
| | | ಕಿತ್ತೂರು | 0 | 0 | 0 | 0 | 0 | - |
| | | ಖಾನಾಪೂರ | 5874ಎ-00ಗು | 1698ಎ-00ಗು | 588ಎ-00ಗು | 1171ಎ-00ಗು | 508ಎ-00ಗು | - |
| | | ಅಥಣಿ (ಕಾಗವಾಡ ತಾಲೂಕು ಒಳಗೊಂಡಂತೆ) | 2842ಎ-11ಗು | 2066ಎ-00ಗು | - | 657ಎ-31ಗು | - | - |
| | | ಗೋಕಾಕ & ಮೂಡಲಗಿ | 1596 | 329ಎ | 30ಎ | 1237ಎ | 0 | - |
| | | ಯರಗಟ್ಟಿ | - | - | - | - | - | ಯರಗಟ್ಟಿ ತಾಲೂಕು ನೂತನವಾಗಿ ರಚನೆಯಾಗಿದ್ದು, ಸದರಿ ಮಾಹಿತಿಯು ಸವದತ್ತಿ ತಾಲೂಕಿನೊಂದಿಗೆ ಒಳಗೊಂಡಿರುತ್ತದೆ |
| | | ರಾಮದುರ್ಗ | 3083ಎ-00ಗುಂ | 689ಎ.00ಗುಂ | 33ಎ.00ಗುಂ | 587ಎ.00ಗುಂ | - | - |
| | | ಸವದತ್ತಿ | 9434ಎ-00ಗುಂ | 947ಎ-00ಗುಂ | 213ಎ-00ಗುಂ | 303ಎ-00ಗುಂ | - | - |
| | | ಬೆಳಗಾವಿ | 424ಎ-00ಗು | 00ಎ-00ಗು | 00ಎ-00ಗು | 00ಎ-00ಗು | 00ಎ-00ಗು | 424ಎಕರೆ 00ಗುಂಟೆ ಹೆಚ್ಚುವರಿ ಜಮೀನಿನ ಪೈಕಿ 173ಎಕರೆ 00ಗುಂಟೆ ಸ್ವಾಧೀನ ಪಡೆದುಕೊಳ್ಳುವ ಪೂರ್ವದಲ್ಲಿ ತಡೆಯಾಜ್ಞೆ ಬಂದ ಕ್ಷೇತ್ರ. ಬಾಕಿ ಉಳಿದ 382ಎಕರೆ 00ಗುಂಟೆ ಹಂಚಿಕೆ ಮಾಡಲು ಯೋಗ್ಯವಲ್ಲದ ಕ್ಷೇತ್ರ ಇರುತ್ತದೆ. |

| | | | | | | | | |
|---|---|---|---|---|---|---|---|---|
| 20 | ಧಾರವಾಡ | ಧಾರವಾಡ | 419ಎ-23ಗು | 296ಎ-23ಗು | 88ಎ-17ಗು | 34ಎ-23ಗು | - | - |
| | | ಅಳ್ನಾವರ | 94ಎ-01ಗುಂ | 80ಎ-01ಗುಂ | 13ಎ-00ಗುಂ | - | - | - |
| | | ಹುಬ್ಬಳ್ಳಿ | 331ಎ-00ಗುಂ | 243ಎ-00ಗುಂ | 0 | 83ಎ-00ಗುಂ | - | - |
| | | ಹುಬ್ಬಳ್ಳಿ ನಗರ | 29ಎ-35ಗುಂ | 08ಎ-33ಗುಂ | 0 | 21ಎ-02ಗುಂ | - | - |
| | | ಕಲಘಟಗಿ | 620-33 | 175-10 | 07-15. | 141-10 | 0 | ಭೂಮಾಲೀಕರಿಗೆ ಹಿಂತಿರುಗಿಸಿದ 166-19ಗುಂ ಭೂನ್ಯಾಯ ಮಂಡಳಿಯ ಆದೇಶದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ರವರಲ್ಲಿ ರಿಟ್ ನಂ 107759-107780/2015 ರಡಿ ಮೇಲ್ಮನವಿ ದಾಖಲಾಗಿದೆ;<br>ಹೆಚ್ಚುವರಿ ಘೋಷಿತ 620-33 ಜಮೀನಿನ ಪೈಕಿ 293ಎ-11ಗುಂ ಅರಣ್ಯ ಖಾತೆಗೆ ಹಾಗೂ 03ಎ-27ಗುಂ ಆಶ್ರಯ ಯೋಜನೆಗೆ ಹಂಚಿಕೆಯಾಗಿರುತ್ತದೆ. |
| | | ನವಲಗುಂದ | 267ಎ-00ಗುಂ | 226ಎ-14ಗುಂ | 0 | 40ಎ-26ಗುಂ | - | - |
| | | ಅಣ್ಣಿಗೇರಿ | 703ಎ-17ಗು | 321ಎ-05ಗು | 08ಎ-33ಗು | 331ಎ-38ಗು | 41-21 | - |
| | | ಕುಂದಗೋಳ | 0 | 0 | 0 | 0 | - | - |
| 21 | ಗದಗ | ಗದಗ | 1124ಎ-20ಗು | 608ಎ-37ಗು | 154ಎ-38ಗು | 360ಎ-25ಗು | 0 | - |
| | | ಮುಂಡರಗಿ | 458ಎ-19ಗು | 275ಎ-02ಗು | 0 | 183ಎ-17ಗು | 0 | - |
| | | ನರಗುಂದ | 613ಎ-10ಗು | 298ಎ-16ಗು | 0 | 235ಎ-06ಗು | 0 | - |
| | | ರೋಣ | 1339ಎ-27ಗು | 641ಎ-0ಗು | 20ಎ-0ಗು | 678ಎ-27ಗು | 0 | - |
| | | ಶಿರಹಟ್ಟಿ | 829ಎ-35ಗು | 601ಎ-37ಗು | 0 | 222ಎ-20ಗು | 0 | - |
| 22 | ಹಾವೇರಿ | ಹಾವೇರಿ | 26.28 | 15-10 | 11-18 | 0 | 0 | - |
| | | ಬ್ಯಾಡಗಿ | 0 | 0 | 0 | 0 | 0 | - |

| | | | | | | | | |
|---|---|---|---|---|---|---|---|---|
| | | ರಾಣೇಬೆನ್ನೂರು | 0 | 0 | 0 | 0 | 0 | |
| | | ಶಿಗ್ಗಾಂವ | 316-19 | 229-19 | 0 | 87-00 | 105ಎ-04ಗುಂ | - |
| | | ರಟ್ಟೀಹಳ್ಳಿ | 0 | 0 | 0 | 0 | 0 | - |
| | | ಹಿರೇಕೆರೂರು | 36-00 | 20-00 | 16-00 | 0 | 78-00 | - |
| | | ಹಾನಗಲ್ಲ | 167-14 | 134-31 | - | 32-23 | 1ಎ-25ಗು | - |
| | | ಸವಣೂರು | 0 | 0 | 0 | 0 | 0 | - |
| 23 | ಉತ್ತರ ಕನ್ನಡ | ಶಿರಸಿ | 68-38-0 | 7-24-0. | 7-10-0. | 0-0-0 | 0-0-0 | ಬದನಗೋಡ ಮತ್ತು ಕಾಳಂಗಿ ಗ್ರಾಮದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗ 14-34-0 ಜಮೀನು ಮಂಜೂರಾಗಿರುತ್ತದೆ 52-04-0. ಬಾಕಿ ಉಳಿದಿರುತ್ತದೆ. |
| | | ಯಲ್ಲಾಪುರ | 2-10-6.6 | 2-10-6.6 | 0-0-0 | 0-0-0 | 0-0-0 | ಮದನೂರು ಗ್ರಾಮದ ಸ.ನಂ. 246/1 ರ ಕ್ಷೇತ್ರ 2-10-6.6 ಅನ್ನು ಹೆಚ್ಚುವರಿ ಅಂತಾ ಗುರುತಿಸಲಾಗಿತ್ತು. ಸದ್ರಿ ಜಮೀನನ್ನು ಪರಿಶಿಷ್ಟ ಜಾತಿಯ ಶ್ರೀ ರಾಮು ಚೆನ್ನಪ್ಪ ಶಿಂಘೆ ಎನ್ನುವವರಿಗೆ ಮಂಜೂರಿ ಮಾಡಲಾಗಿರುತ್ತದೆ |
| | | ಮುಂಡಗೋಡ | 19-37-0 | 0-0-0 | 0-0-0 | 0-0-0 | 0-0-0 | ಹೆಚ್ಚುವರಿ ಜಮೀನನ್ನು ಲ್ಯಾಂಡ ಬ್ಯಾಂಕಿಗೆ ವರ್ಗಾಯಿಸಲಾಗಿರುತ್ತದೆ. |
| | | ಕಾರವಾರ | 0-0-0 | 0-0-0 | 0-0-0 | 0-0-0 | 0-0-0 | ಭೂಸುಧಾರಣಾ ಕಾಯ್ದೆಯಡಿ ಹೆಚ್ಚುವರಿ ಜಮೀನು ಘೋಷಣೆಯಾಗಿರುವುದಿಲ್ಲ. |
| | | ಅಂಕೋಲಾ | 0-0-0 | 0-0-0 | 0-0-0 | 0-0-0 | 0-0-0 | |
| | | ಕುಮಟಾ | 0-0-0 | 0-0-0 | 0-0-0 | 0-0-0 | 0-0-0 | |
| | | ಹೊನ್ನಾವರ | 0-0-0 | 0-0-0 | 0-0-0 | 0-0-0 | 0-0-0 | |
| | | ಭಟ್ಕಳ | 0-0-0 | 0-0-0 | 0-0-0 | 0-0-0 | 0-0-0 | |
| | | ಸಿದ್ದಾಪುರ | 0-0-0 | 0-0-0 | 0-0-0 | 0-0-0 | 0-0-0 | |
| | | ಹಳಿಯಾಳ | 0-0-0 | 0-0-0 | 0-0-0 | 0-0-0 | 0-0-0 | |
| | | ದಾಂಡೇಲಿ | 0-0-0 | 0-0-0 | 0-0-0 | 0-0-0 | 0-0-0 | |

| | | | | | | | |
|---|---|---|---|---|---|---|---|
| 24 | ವಿಜಯಪುರ | ಇಂಡಿ | 2870 ಎ-00 ಗುಂ | 1410ಎ-00 ಗುಂ | 135ಎ-00ಗುಂ | 1305ಎ-00 ಗುಂ | 0-0-0 | - |
| | | ಚಡಚಣ | 1449ಎ-15ಗುಂ | 632ಎ -30ಗುಂ | 43ಎ-00ಗುಂ | 618ಎ-25ಗುಂ | 0-0-0 | - |
| | | ಆಲಮೇಲ | 928-24-00 | 720-09-00 | 88-10-00 | 0-0-0 | 0-0-0 | - |
| | | ದೇವರ ಹಿಪ್ಪರಗಿ | 674-19-00 | 383-17-00 | 19-28-00 | 0-0-0 | 0-0-0 | - |
| | | ಸಿಂದಗಿ | 2105-18-0 | 1038-34-0 | 110-14-0 | 0-0-0 | 0-0-0 | - |
| | | ಬಸವನ ಬಾಗೇವಾಡಿ | 2593ಎ-30ಗುಂ | 1876ಎ-39ಗುಂ | 10ಎ-29ಗುಂ | 628ಎ-25ಗುಂ | 77ಎ-17ಗುಂ | - |
| | | ವಿಜಯಪುರ | 5188ಎ-39ಗು | 4175ಎ-29ಗು | 406ಎ-23ಗು | 606ಎ-23ಗು | 0 | - |
| | | ತಿಕೋಟಾ | 0 | 0 | 0 | 0 | 0 | - |
| | | ಬಬಲೇಶ್ವರ | 0 | 0 | 0 | 0 | 0 | ಸನ್-2018-19ನೇ ಸಾಲೀನಲ್ಲಿ ಬಬಲೇಶ್ವರ ಹೊಸ ತಾಲ್ಲೂಕಾಗಿ ಘೋಷಣೆಯಾಗಿದ್ದು, ಈ ಅವಧಿ ನಂತರ ಯಾವುದೇ ಹೆಚ್ಚುವರಿ ಜಮೀನು ಅಂತಾ ಘೋಷಣೆಯಾಗಿರುವುದಿಲ್ಲ. ಹಾಗೂ ನ್ಯಾಯಾಲಯದ ಆದೇಶದಂತೆ ಭೂ ರಹಿತರಿಗೆ ಹಂಚಿಕೆ ಮಾಡಿದ ಜಮೀನುಗಳನ್ನು ಮೂಲ ಮಾಲೀಕರಿಗೆ ಹಿಂತಿರುಗಿಸಿರುವ ಪ್ರಕರಣಗಳು ಯಾವು ಇರುವುದಿಲ್ಲ. |
| | | ನಿಡಗುಂದಿ | 0 | 0 | 0 | 0 | 0 | ಸನ್-2018-19ನೇ ಸಾಲೀನಲ್ಲಿ ನಿಡಗುಂದಿ ಹೊಸ ತಾಲೂಕಾಗಿ ಘೋಷಣೆಯಾಗಿದ್ದು, ಈ ಅವಧಿ ನಂತರ ಯಾವುದೇ ಹೆಚ್ಚುವರಿ ಜಮೀನು ಅಂತಾ ಘೋಷಣೆಯಾಗಿರುವುದಿಲ್ಲ. ಹಾಗೂ ನ್ಯಾಯಾಲಯದ ಆದೇಶದಂತೆ ಭೂ ರಹಿತರಿಗೆ ಹಂಚಿಕೆ ಮಾಡಿದ ಜಮೀನುಗಳನ್ನು ಮೂಲ ಮಾಲೀಕರಿಗೆ ಹಿಂತಿರುಗಿಸಿರುವ ಪ್ರಕರಣಗಳು ಯಾವು ಇರುವುದಿಲ್ಲ. |
| | | ಕೊಲ್ಹಾರ | 0 | 0 | 0 | 0 | 0 | ಸನ್-2018-19ನೇ ಸಾಲೀನಲ್ಲಿ ಕೊಲ್ಹಾರ ಹೊಸ ತಾಲೂಕಾಗಿ ಘೋಷಣೆಯಾಗಿದ್ದು, ಈ ಅವಧಿಯ ನಂತರ ಯಾವುದೇ ಜಮೀನುಗಳು ಹೆಚ್ಚುವರಿ ಜಮೀನು ಅಂತಾ ಘೋಷಣೆಯಾಗಿರುವುದಿಲ್ಲ. ಹಾಗೂ ನ್ಯಾಯಾಲಯದ ಆದೇಶದಂತೆ ಭೂ ರಹಿತರಿಗೆ ಹಂಚಿಕೆ ಮಾಡಿದ ಜಮೀನುಗಳನ್ನು ಮೂಲ ಮಾಲೀಕರಿಗೆ ಹಿಂತಿರುಗಿಸಿರುವ ಪ್ರಕರಣದ ಒಟ್ಟು ಕ್ಷೇತ್ರವು 77ಎ-17ಗುಂ ಇರುತ್ತದೆ. |
| | | ಮುದ್ದೇಬಿಹಾಳ | 2446ಎ-35ಗು | 1613ಎ-00ಗು | 48ಎ-08ಗು | 785ಎ-00ಗು | -- | - |
| | | ತಾಳಿಕೋಟಿ | 0 | 0 | 0 | 0 | 0 | - |

| | | | | | | | | |
|---|---|---|---|---|---|---|---|---|
| 25 | ಬಳ್ಳಾರಿ | ಬಳ್ಳಾರಿ | 6904.4 | 3991.64 | 752.04 | 2160.72 | 0 | - |
| | | ಸಿರಗುಪ್ಪ | 4305.85 | 2890.24 | 166.21 | 1249.4 | 0 | - |
| | | ಸಂಡೂರು | 1169 | 317.81 | 361.33 | 489.86 | 0 | - |
| | | ಕುರುಗೋಡು | 0 | 0 | 0 | 0 | 0 | - |
| | | ಕಂಪ್ಲಿ | 0 | 0 | 0 | 0 | 0 | - |
| 26 | ಬೀದರ್ | ಬೀದರ್ | 644-01 | 346-03 | 0 | 297-38 | 0 | - |
| | | ಔರಾದ (ಬಾ) | 642-02 | 354-39 | 0 | 802-06 | 0 | - |
| | | ಕಮಲನಗರ | | | | | | - |
| | | ಬಸವಕಲ್ಯಾಣ | 868-34 | 62-28 | 0 | 802-06 | 0 | - |
| | | ಹುಲಸೂರು | | | | | | - |
| | | ಭಾಲ್ಕಿ | 1139-33 | 800-05 | 400-00 | 234-25 | 0 | - |
| | | ಹುಮನಾಬಾದ | 1817-14 | 408-03 | 51-38 | 1357-14 | 0 | - |
| | | ಚಿಟಗುಪ್ಪ | 192-24 | 133-22 | 0 | 59-02 | 0 | - |
| 27 | ಕಲಬುರಗಿ | ಕಲಬುರಗಿ | 927-19 | 650-19 | 80-20 | 196-20 | 0 | - |
| | | ಅಫಜಲಾಪೂರ | 2628-00 | 1014-00 | 0 | 492-00 | 0 | - |
| | | ಜೇವರ್ಗಿ | 2488-06 | 1444-36 | 7-26 | 1035-21 | 0 | - |
| | | ಅಳಂದ | 1059 | 697-00 | 0 | 362-00 | 0 | - |
| | | ಕಾಳಗಿ | 0 | 0 | 0 | 0 | 0 | - |
| | | ಕಮಲಾಪೂರ | 0 | 0 | 0 | 0 | 0 | - |
| | | ಯಡ್ರಾಮಿ | 0 | 0 | 0 | 0 | 0 | - |
| | | ಸೇಡಂ | 2309-00 | 1257-00 | 0 | 837-00 | 0 | - |
| | | ಚಿತ್ತಾಪೂರ | 2452-16 | 1682-35 | 0 | 769-21 | 0 | - |
| | | ಚಿಂಚೋಳಿ | 5575-05 | 1495-00 | 230-00 | 808-00 | 0 | - |
| | | ಶಹಾಬಾದ | 0 | 0 | 0 | 0 | 0 | - |

| | | | | | | | | |
|---|---|---|---|---|---|---|---|---|
| 28 | ಕೊಪ್ಪಳ | ಕೊಪ್ಪಳ | 4898-28 | 884-16 | 149-32 | 527-22 | 0 | - |
| | | ಗಂಗಾವತಿ | 4613-34 | 1150-30 | 21-35 | 177-02 | 0 | - |
| | | ಕುಷ್ಟಗಿ | 1482-27 | 196-22 | 50-15 | 185-09 | 0 | - |
| | | ಯಲಬುರ್ಗಾ | 3615-06 | 1679-26 | 42-22 | 1694-23 | 0 | - |
| | | ಕುಕನೂರು | 0 | 0 | 0 | 0 | 0 | - |
| | | ಕಾರಟಗಿ | 0 | 0 | 0 | 0 | 0 | - |
| | | ಕನಕಗಿರಿ | 0 | 0 | 0 | 0 | 0 | - |
| 29 | ರಾಯಚೂರು | ರಾಯಚೂರು | 11662-27 | 2324 | 03-00 | 1085-02 | 0 | - |
| | | ಮಾನವಿ | 7614-00 | 3382-22 | 1644-00 | 0 | 466 | ಭೂ ರಹಿತರಿಗೆ ಹಂಚಿಕೆ ಮಾಡಲಾದ ಕೃಷಿ ಭೂಮಿಯಲ್ಲಿ ಭೂ ನ್ಯಾಯ ಮಂಡಳಿಗಳ ಆದೇಶದ ಮೇರೆಗೆ 466 ಎಕರೆ ಕೃಷಿ ಭೂಮಿಯನ್ನು ಮೂಲ ಮಾಲೀಕರಿಗೆ ಹಿಂತಿರುಗಿಸಲಾಗಿದೆ. |
| | | ಸಿರವಾರ | 341-26 | 341-26 | 0 | 0 | 0 | - |
| | | ದೇವದುರ್ಗ | 1299-35 | 1046 | 252-05 | 00-00 | 0 | - |
| | | ಅರಕೇರಾ | 0 | 0 | 0 | 0 | 0 | - |
| | | ಲಿಂಗಸೂಗೂರು | **3612-16** | **3612-16** | **3612-16** | **00-00** | **0** | - |
| | | ಸಿಂಧನೂರು | 2356-00 | 925-15 | 620-15 | 810-10 | 0 | - |
| | | ಮಸ್ಕಿ | 00-00 | 00-00 | 00-00 | 00-00 | 0 | - |
| 30 | ವಿಜಯನಗರ | ಹೊಸಪೇಟೆ | 543.41 | 389.12 | 0 | 154.29 | 0 | - |
| | | ಹಗರಿಬೊಮ್ಮನಹಳ್ಳಿ | 0 | 0 | 0 | 0 | 0 | - |
| | | ಕೂಡ್ಲಿಗಿ | 840.13 | 386.12 | 86.11 | 367.9 | 0 | - |
| | | ಹಡಗಲಿ | 1269.08 | 576.98 | 4 | 486.81 | 0 | - |
| | | ಹರಪನಹಳ್ಳಿ | 1227.18 | 900.18 | 200 | 127 | 0 | - |

| | | | | | | | | |
|---|---|---|---|---|---|---|---|---|
| | | ಕೊಟ್ಟೂರು | 0 | 0 | 0 | 0 | 0 | - |
| 31 | ಯಾದಗಿರಿ | ಶಹಾಪೂರ/ ವಡಗೇರಾ | 3999-00 | 1240-00 | 57-00 | 731-00 | 0 | - |
| | | ಸುರಪುರ/ಹುಣಸಗಿ | 2679-00 | 710-00 | 455-00 | 255-00 | 0 | - |
| | | ಯಾದಗಿರಿ/ ಗುರುಮಿಠಕಲ್ | 2732-00 | 1235-00 | 972-00 | 0 | 0 | - |

ಅನುಬಂಧ - 2

| ಅನುಬಂಧ- 2<br>(ಆರ್.ಸಿ.ಸಿ.ಎಂ.ಎಸ್ ತಂತ್ರಾಂಶದಲ್ಲಿ ಬಾಕಿ ಇರುವ ಪಿ.ಟಿ.ಸಿ.ಎಲ್ ಪ್ರಕರಣಗಳ ಸಂಖ್ಯೆ) | | | |
|---|---|---|---|
| ಕ್ರ.ಸಂ | ಜಿಲ್ಲೆ | ತಾಲ್ಲೂಕು | ಒಟ್ಟು ಪ್ರಕರಣಗಳ ಸಂಖ್ಯೆ |
| 1 | Ballari | BELLARY | 4 |
| 2 | Ballari | KURUGODU | 1 |
| 3 | Ballari | SANDUR | 1 |
| 4 | Ballari | SIRUGUPPA | 4 |
| 5 | Belagavi | Athni | 1 |
| 6 | Bengaluru | Anekal | 286 |
| 7 | Bengaluru | Bengaluru East | 358 |
| 8 | Bengaluru | Bengaluru North | 172 |
| 9 | Bengaluru | Bengaluru North (Addl.) | 374 |
| 10 | Bengaluru | Bengaluru South | 125 |
| 11 | Bengaluru Rural | Devanahalli | 282 |
| 12 | Bengaluru Rural | DodBallapur | 244 |
| 13 | Bengaluru Rural | Hosakote | 193 |
| 14 | Bengaluru Rural | Nelamangala | 119 |
| 15 | Bengaluru South | Channapatna | 16 |
| 16 | Bengaluru South | Harohalli | 17 |
| 17 | Bengaluru South | Kanakapura | 14 |
| 18 | Bengaluru South | Magadi | 7 |
| 19 | Bengaluru South | Ramanagara | 63 |
| 20 | Chamarajanagar | Chamrajnagar | 1 |
| 21 | Chamarajanagar | Gundlupet | 3 |
| 22 | Chamarajanagar | Hanur | 5 |
| 23 | Chamarajanagar | Kollegal | 2 |
| 24 | Chikkaballapura | Bagepalli | 8 |
| 25 | Chikkaballapura | CHELURU | 6 |
| 26 | Chikkaballapura | Chikkaballapur | 97 |
| 27 | Chikkaballapura | Chintamani | 69 |
| 28 | Chikkaballapura | Gauribidanur | 31 |
| 29 | Chikkaballapura | gudibande | 21 |
| 30 | Chikkaballapura | Manchenahalli | 5 |
| 31 | Chikkaballapura | SIDLAGHATTA | 97 |
| 32 | Chikkamagaluru | Ajjampura | 5 |
| 33 | Chikkamagaluru | Chikkamagaluru | 22 |
| 34 | Chikkamagaluru | Kadur | 28 |
| 35 | Chikkamagaluru | Mudigere | 5 |
| 36 | Chikkamagaluru | Narasimharajapura | 1 |
| 37 | Chikkamagaluru | Tarikere | 37 |
| 38 | CHITRADURGA | Challakere | 56 |
| 39 | CHITRADURGA | Chitradurga | 17 |
| 40 | CHITRADURGA | Hiriyur | 23 |
| 41 | CHITRADURGA | Holalkere | 14 |
| 42 | CHITRADURGA | Hosdurga | 26 |

| | | | | |
|---|---|---|---|---|
| 44 | Dakshina Kannada | Mangalore | | 1 |
| 45 | DAVANAGERE | Channagiri | | 5 |
| 46 | DAVANAGERE | Davanagere | | 2 |
| 47 | DAVANAGERE | Honnali | | 3 |
| 48 | DAVANAGERE | JAGALUR | | 8 |
| 49 | DAVANAGERE | NYAMATHI | | 2 |
| 50 | DHARWAD | Alnavar | | 3 |
| 51 | DHARWAD | Dharwad | | 1 |
| 52 | DHARWAD | Kalghatgi | | 1 |
| 53 | GADAG | Gadag | | 1 |
| 54 | HASSAN | Belur | | 1 |
| 55 | HASSAN | Hassan | | 4 |
| 56 | HAVERI | Hangal | | 5 |
| 57 | HAVERI | Haveri | | 3 |
| 58 | HAVERI | Ranibennur | | 4 |
| 59 | Kalaburagi | Kalaburagi | | 1 |
| 60 | KODAGU | Kushalnagara | | 4 |
| 61 | KODAGU | Madikeri | | 1 |
| 62 | KOLAR | Bangarapet | | 24 |
| 63 | KOLAR | KGF | | 7 |
| 64 | KOLAR | Kolar | | 81 |
| 65 | KOLAR | Malur | | 61 |
| 66 | KOLAR | Mulbagal | | 30 |
| 67 | KOLAR | Srinivaspur | | 42 |
| 68 | KOPPAL | Gangawati | | 1 |
| 69 | MANDYA | Krishnarajapet | | 3 |
| 70 | MANDYA | Maddur | | 14 |
| 71 | MANDYA | Malavalli | | 13 |
| 72 | MANDYA | Mandya | | 30 |
| 73 | MANDYA | Nagamangala | | 9 |
| 74 | MANDYA | Pandavapura | | 2 |
| 75 | MANDYA | Srirangapatna | | 7 |
| 76 | Mysuru | Heggadadevankote | | 4 |
| 77 | Mysuru | Hunsur | | [illegible] |
| 78 | Mysuru | Mysore | | 17 |
| 79 | Mysuru | Nanjangud | | 2 |
| 80 | Mysuru | Piriyapatna | | 3 |
| 81 | Mysuru | Saligrama | | 2 |
| 82 | Mysuru | SARGUR | | 1 |
| 83 | Shivamogga | Bhadravati | | 9 |
| 84 | Shivamogga | Shivamogga | | 7 |
| 85 | Tumakuru | Chiknayakanhalli | | 18 |
| 86 | Tumakuru | Gubbi | | 24 |
| 87 | Tumakuru | Koratagere | | 10 |
| 88 | Tumakuru | Kunigal | | 17 |
| 89 | Tumakuru | Madhugiri | | 19 |

| | | | |
|---|---|---|---|
| 90 | Tumakuru | Pavagada | 3 |
| 91 | Tumakuru | Sira | 25 |
| 92 | Tumakuru | Tiptur | 23 |
| 93 | Tumakuru | Tumakuru | 23 |
| 94 | Tumakuru | Turuvekere | 12 |
| 95 | UTTARA KANNADA | HONAVAR | 1 |
| 96 | UTTARA KANNADA | MUNDGOD | 2 |
| 97 | Vijayanagara | HAGARIBOMMANA HALLI | 1 |
| 98 | Vijayanagara | HOSPET | 4 |
| 99 | Vijayanagara | HUVINA HADAGALI | 1 |
| 100 | Vijayapura | Indi | 1 |
| 101 | Vijayapura | Tikota | 2 |
| 102 | YADGIR | Gurmitkal | 1 |
| **Total** | | | 3478 |


3

File No. RC-MIS/235/2026-MNGEST-REVENUE COMMISSIONERATE (Computer No. 2264891)

ಅನುಬಂಧ-3

# ಕರ್ನಾಟಕ ಸರ್ಕಾರ

ಸಂಖ್ಯೆ: ಆರ್‌ಡಿ 45 ಎಲ್‌ಜಿಪಿ 2023

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 01.12.2023

## ಸುತ್ತೋಲೆ

ವಿಷಯ: ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 94-ಎ, 94-ಬಿ, 94-ಎ(4)ರಡಿ ಕಲ್ಪಿಸಿರುವ ಅವಕಾಶದಂತೆ ನಮೂನೆ-50, 53 ಮತ್ತು 57ರಡಿ ಸ್ವೀಕೃತವಾಗಿರುವ ಅರ್ಜಿಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸುವ ಕುರಿತು ಮಾರ್ಗಸೂಚಿಗಳು.

* * *

ನೂತನ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ನಡೆದ ಕಂದಾಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಕಲಂ 94-ಎ, 94-ಬಿ ಮತ್ತು 94-ಎ(4)ರ ಅಡಿಯಲ್ಲಿ ಕಲ್ಪಿಸಿರುವ ಅವಕಾಶದಂತೆ ನಮೂನೆ-50, 53 ಮತ್ತು 57ರಡಿ ಸ್ವೀಕರಿಸಿರುವ ಅರ್ಜಿಗಳ ಪೈಕಿ ಸಾಕಷ್ಟು ಅರ್ಜಿಗಳು ವಿಲೇವಾರಿಯಾಗದೇ ಗಮನಾರ್ಹ ಪ್ರಮಾಣದಲ್ಲಿ ತಾಲ್ಲೂಕು ಹಂತದಲ್ಲಿ ಬಗರ್ ಹುಕುಂ ಸಮಿತಿಗಳ ಮುಂದೆ ಬಾಕಿ ಇರುವುದು ಹಾಗೂ ಇವುಗಳ ಪೈಕಿ ಮಂಜೂರಾತಿಗೆ ಅರ್ಹವಿಲ್ಲದ ಅರ್ಜಿಗಳು ಬಾಕಿ ಇರಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಇದಲ್ಲದೇ, ಸರ್ಕಾರಿ ಜಮೀನು ಒತ್ತುವರಿ ತೆರವಿಗೆ ಸಂಬಂಧಿಸಿದ ಹಲವಾರು ಪ್ರಕರಣಗಳಲ್ಲಿ ನಮೂನೆ-50, 53 ಮತ್ತು 57ರ ಸಾಕಷ್ಟು ಅರ್ಜಿಗಳು ಇತ್ಯರ್ಥವಾಗದೇ ಬಾಕಿ ಇರುವುದರಿಂದ ಒತ್ತುವರಿಯನ್ನು ಪರಿಣಾಮಕಾರಿಯಾಗಿ ತೆರವುಗೊಳಿಸಲು ಸಾಧ್ಯವಾಗಿರುವುದಿಲ್ಲ. ಮಾನ್ಯ ನ್ಯಾಯಾಲಯವೂ ಸಹ ಬಗರ್ ಹುಕುಂ ಸಮಿತಿಗಳು ಅರ್ಜಿಗಳನ್ನು ಇತ್ಯರ್ಥಮಾಡದೇ ಬಾಕಿ ಇರುವುದನ್ನು ಗಂಭೀರವಾಗಿ ಪರಿಗಣಿಸಿರುತ್ತದೆ.

ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 94-ಎ ಮತ್ತು ಕರ್ನಾಟಕ ಭೂ ಕಂದಾಯ ನಿಯಗಳು, 1966ರ ನಿಯಮ-108(ಇ)ರಡಿ ಆಯಾ ವಿಧಾನಸಭಾ ಕ್ಷೇತ್ರವಾರು ಬಗರಾಹುಕುಂ ಸಾಗುವಳಿ ಸಮಿತಿ ರಚಿಸಲು ಅವಕಾಶವಿದ್ದು, ಅಂತಹ ಸಮಿತಿಗೆ ಸಂಬಂಧಪಟ್ಟ ವಿಧಾನಸಭಾ ಸದಸ್ಯರು ಅಧ್ಯಕ್ಷರಾಗಿದ್ದು, ಮೂವರು ಅಧಿಕಾರೇತರ ನಾಮನಿರ್ದೇಶಿತ ಸದಸ್ಯರುಗಳನ್ನು ಒಳಗೊಂಡಿದ್ದು, ಸಂಬಂಧಪಟ್ಟ ತಹಶೀಲ್ದಾರರು ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ ಮತ್ತು ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 108-ಇಇ ರನ್ವಯ ಹೆಚ್ಚುವರಿ ಸಮಿತಿಗಳನ್ನು ರಚಿಸಲು ಅವಕಾಶವಿರುತ್ತದೆ

ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 108-ಇ (2 ಮತ್ತು 3)ರ ಪ್ರಕಾರ ಅಧ್ಯಕ್ಷ ಮತ್ತು ಅವನ ಅನುಪಸ್ಥಿತಿಯಲ್ಲಿ ತಹಶೀಲ್ದಾರನು ಸಭೆಯನ್ನು ಸಂಯೋಜಿಸತಕ್ಕದ್ದು ಮತ್ತು ಸಭೆಯಲ್ಲಿ ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಸಮಿತಿ ಕೋರಂ ಎರಡು ಆಗಿರತಕ್ಕದ್ದು ಅದರಲ್ಲಿ ಒಬ್ಬರು ತಹಶೀಲ್ದಾರರಾಗಿರತಕ್ಕದ್ದು ಎಂದು ತಿಳಿಸಲಾಗಿದೆ.

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಕಲಂ 94-ಎ, 94-ಬಿ ಮತ್ತು 94-ಎ(4)ರ ಅಡಿಯಲ್ಲಿ ನಮೂನೆ-50, 53 ಮತ್ತು 57ರಡಿ ಸ್ವೀಕರಿಸಿರುವ ಅರ್ಜಿಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲು ಈ ಕೆಳಕಂಡ ಕ್ರಮಗಳನ್ನು ಅನುಸರಿಸುವುದು:-

[illegible] 1964ರ ಕಲಂ 94-ಎ ರಡಿ ನಮೂನೆ 50ರಡಿ ಸ್ವೀಕರಿಸಿದ ಅರ್ಜಿಗಳನ್ನು ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 108-ಸಿ(2)ರನ್ವಯ ನಮೂನೆ-51ರಲ್ಲಿ ಅರ್ಜಿಯ ವಿವರಗಳನ್ನು ನಮೂದಿಸತಕ್ಕದ್ದು.

2. ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94-ಬಿ ರಡಿ ನಮೂನೆ-53ರಡಿ ಸ್ವೀಕರಿಸಿದ ಅರ್ಜಿಗಳನ್ನು ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 108 ಸಿಸಿ(2)ರನ್ವಯ ನಮೂನೆ 56ರಲ್ಲಿ ಅರ್ಜಿಯ ವಿವರಗಳನ್ನು ನಮೂದಿಸತಕ್ಕದ್ದು.

3. ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94 ಎ(4) ರಡಿ ನಮೂನೆ-57ರಡಿ ಸ್ವೀಕರಿಸಿದ ಅರ್ಜಿಗಳನ್ನು ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 108-ಸಿಸಿಸಿ(2)ರನ್ವಯ ನಮೂನೆ-58ರಲ್ಲಿ ಅರ್ಜಿಯ ವಿವರಗಳನ್ನು ನಮೂದಿಸತಕ್ಕದ್ದು.

4. ಗ್ರಾಮದ ಒಂದು ಸರ್ವೆ ನಂಬರ್‌ನಲ್ಲಿ ಬಾಕಿ ಇರುವ ನಮೂನೆ-50, 53 ಮತ್ತು 57ರ ಅರ್ಜಿಗಳನ್ನು ವಿಲೇವಾರಿ ಮಾಡುವಾಗ ಕ್ರಮವಾಗಿ ಮೊದಲು ನಮೂನೆ-50 ರಲ್ಲಿ ಸ್ವೀಕರಿಸಿದ ಅರ್ಜಿಗಳನ್ನು ನಂತರ ನಮೂನೆ-53ರಲ್ಲಿ ಸ್ವೀಕರಿಸಿದ ಅರ್ಜಿಗಳನ್ನು ಹಾಗೂ ತದ ನಂತರದಲ್ಲಿ ನಮೂನೆ-57ರಲ್ಲಿ ಸ್ವೀಕರಿಸಿದ ಅರ್ಜಿಗಳನ್ನು ಹಿರಿತನದ ಆಧಾರದ ಮೇಲೆ ವಿಲೇವಾರಿ ಮಾಡತಕ್ಕದ್ದು. ಬಾಕಿ ಇರುವ ನಮೂನೆ-50 ಹಾಗೂ ನಮೂನೆ-53ರ ಅರ್ಜಿಗಳನ್ನು ಕಡ್ಡಾಯವಾಗಿ ತಂತ್ರಾಂಶದಲ್ಲಿ ಇಂಡೀಕರಿಸಿದ ನಂತರ ಅರ್ಜಿಗಳನ್ನು ಇತ್ಯರ್ಥಪಡಿಸಲು ತಹಶೀಲ್ದಾರರು ಬಗರ್ ಹುಕುಂ ತಂತ್ರಾಂಶದಲ್ಲಿಯೇ ಮುಂದಿನ ಕ್ರಮವಹಿಸತಕ್ಕದ್ದು.

5. ತಹಶೀಲ್ದಾರರು ಅರ್ಜಿಗಳನ್ನು ಪರಿಶೀಲಿಸಿದ ನಂತರ ಅನರ್ಹ ಅರ್ಜಿಗಳನ್ನು ಜಿಲ್ಲಾಧಿಕಾರಿಗಳಿಗೆ ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 108ಸಿ, ನಿಯಮ 108ಸಿಸಿ ಹಾಗೂ ನಿಯಮ 108ಸಿಸಿಸಿ ರಡಿ ವಿಲೇಗೊಳಿಸಲು ಸಲ್ಲಿಸತಕ್ಕದ್ದು ಹಾಗೂ ಅರ್ಹ ಅರ್ಜಿಗಳನ್ನು ಸಮಿತಿಯ ಮುಂದೆ ಮಂಡಿಸಲು ಕ್ರಮವಹಿಸತಕ್ಕದ್ದು.

6. ಸಮಿತಿಯ ಕಾರ್ಯದರ್ಶಿಯಾಗಿರುವ ತಹಶೀಲ್ದಾರರು ದಾಖಲೆಗಳನ್ನು ಸ್ವೀಕರಿಸಿದ ನಂತರ ಅರ್ಜಿಗಳನ್ನು ಪರಿಶೀಲಿಸಿ ನಿಗದಿಪಡಿಸಿದ ಚೆಕ್ ಲಿಸ್ಟ್‌ನಲ್ಲಿ ವಿವರಗಳನ್ನು ಕಡ್ಡಾಯವಾಗಿ ಭರ್ತಿಮಾಡಿ ಅರ್ಹ ಅರ್ಜಿಗಳನ್ನು ಸಮಿತಿಯ ಮುಂದೆ ಮಂಡಿಸತಕ್ಕದ್ದು ಹಾಗೂ ಅನರ್ಹ ಅರ್ಜಿಗಳನ್ನು ಪರಿಶೀಲಿಸಿ ನಿಗದಿಪಡಿಸಿದ ಚೆಕ್ ಲಿಸ್ಟ್‌ನಲ್ಲಿ ವಿವರಗಳನ್ನು ಕಡ್ಡಾಯವಾಗಿ ಭರ್ತಿಮಾಡಿ ಜಿಲ್ಲಾಧಿಕಾರಿಗಳಿಗೆ ವರ್ಗಾಯಿಸತಕ್ಕದ್ದು.

7. ನಮೂನೆ-50, 53 ಮತ್ತು 57ರಲ್ಲಿ ಸ್ವೀಕರಿಸಿದ ಅರ್ಹ ಅರ್ಜಿಗಳನ್ನು ತಹಶೀಲ್ದಾರರು ಹಿರಿತನ ಕ್ರಮದಲ್ಲಿ ದಾಖಲಿಸತಕ್ಕದ್ದು ಮತ್ತು ಸಂಬಂಧಿತ ಎಲ್ಲಾ ದಾಖಲೆಗಳನ್ನು ಮತ್ತಷ್ಟು ಪರಿಶೀಲನೆಗಾಗಿ ಅವರಿಂದ ಅಧಿಕೃತವಾಗಿ ಅಧಿಕಾರ ಪಡೆದ ಅಧಿಕಾರಿಗಳಿಗೆ ಕಳುಹಿಸತಕ್ಕದ್ದು. ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂದಾಖಲೆಗಳ ಉಪ ನಿರ್ದೇಶಕರು ಬಗರ್ ಹುಕುಂ ಅರ್ಹ ಅರ್ಜಿಗಳ ಕಡತ

ಕಾರ್ಯಗತಗೊಳಿಸುವುದಕ್ಕಾಗಿಯೇ ಪ್ರತ್ಯೇಕವಾಗಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಇಬ್ಬರು [illegible] ಯೋಜನೆದಾರರನ್ನು ಕಡ್ಡಾಯವಾಗಿ ನಿಯೋಜಿಸತಕ್ಕದ್ದು. ಕಂದಾಯ ಮತ್ತು ಸರ್ವೆ ಇಲಾಖೆ ಅಧಿಕಾರಿಗಳು ಈ ಕೆಳಕಂಡಂತೆ ಕ್ರಮವಹಿಸತಕ್ಕದ್ದು.

- ಸ್ಥಳ ತನಿಖೆ ಮಾಡುವಾಗ ಅನಧಿಕೃತ ಸಾಗುವಳಿದಾರರ ಆಧಾರ್ e-KYC ಕಡ್ಡಾಯವಾಗಿ ಮಾಡತಕ್ಕದ್ದು.
- ಸ್ಥಳ ತನಿಖೆ ನಡೆಸುವಾಗ ಅನಧಿಕೃತ ಸಾಗುವಳಿ ಜಮೀನಿನ ವಿಸ್ತೀರ್ಣ ಮತ್ತು ಗಡಿಯನ್ನು ಬಗರ್ ಹುಕುಂ ಮೊಬೈಲ್ ಆಪ್ (Mobile App) ಮೂಲಕ Geo Fencing ಮಾಡತಕ್ಕದ್ದು.
- ಕಂದಾಯ ಅಧಿಕಾರಿಗಳು ಹಾಗೂ ಸರ್ವೆ ಇಲಾಖೆಯ ಅಧಿಕಾರಿಗಳು ಅನಧಿಕೃತ ಸಾಗುವಳಿದಾರರ ಜಮೀನಿನ Geo fencing ಮಾಡುವಾಗ ರಸ್ತೆ ಸಂಪರ್ಕ (ಬಂಡಿದಾರಿ) ನಕ್ಷೆಯಲ್ಲಿ ಕಡ್ಡಾಯವಾಗಿ ಗುರುತಿಸತಕ್ಕದ್ದು.
- ಮಹಜರ್ ಪ್ರಕ್ರಿಯೆಯನ್ನು ಬಗರ್ ಹುಕುಂ ಮೊಬೈಲ್ ಆಪ್ (Mobile App) ಮೂಲಕವೇ ಚಿತ್ರೀಕರಣ ಮಾಡತಕ್ಕದ್ದು.
- ಸ್ಥಳ ತನಿಖೆಯ ಸಮಯದಲ್ಲಿ ಅರ್ಜಿದಾರರಿಂದ ಪಡಿತರ ಚೀಟಿ, ಅಹವಾಲ್ ತಃಖ್ತೆ, ಆಧಾರ್ ಸಂಖ್ಯೆ ತಹಶೀಲ್ದಾರರಿಂದ ಪಡೆದ ಜಾತಿ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರಗಳನ್ನು ಪಡೆದು ಮೊಬೈಲ್ ಆಪ್ ನಲ್ಲಿ ನಮೂದಿಸತಕ್ಕದ್ದು.
- ಗ್ರಾಮ ಆಡಳಿತಾಧಿಕಾರಿ ಹಾಗೂ ಕಂದಾಯ ನಿರೀಕ್ಷಕರು ಸ್ಥಳ ಪರಿಶೀಲನಾ ವರದಿ, ನಕ್ಷೆ, ಮಹಜರ್‌ನೊಂದಿಗೆ ವರದಿಯನ್ನು ಸರ್ವೆ ಇಲಾಖೆಗೆ ಹಾಗು ತಹಶೀಲ್ದಾರಿಗೆ ಏಕ ಕಾಲದಲ್ಲಿ ತಂತ್ರಾಂಶದಲ್ಲಿ ಸಲ್ಲಿಸತಕ್ಕದ್ದು.
- ಮುಂದುವರೆದು, ಸರ್ವೆ ಇಲಾಖೆ ಅಧಿಕಾರಿಗಳು ಕಂದಾಯ ಅಧಿಕಾರಿಗಳು ಸಲ್ಲಿಸಿರುವ ನಕ್ಷೆಯನ್ನು ಪರಿಶೀಲಿಸಿಕೊಂಡು ತಂತ್ರಾಂಶದಲ್ಲಿ ಸ್ವೀಕರಿಸಿದ ಮಾಹಿತಿಯನ್ನಯು ದರಖಾಸ್ತು ಪೋಡಿಗಾಗಿ ಕಡತದ ಪೂರ್ವ ಸಿದ್ಧತೆಯನ್ನು ಮಾಡಿಕೊಳ್ಳತಕ್ಕದ್ದು.

8. ಅರ್ಜಿಗಳನ್ನು ಪರಿಶೀಲಿಸುವಾಗ ಸದಸ್ಯ ಕಾರ್ಯದರ್ಶಿಯಾದ ತಹಶೀಲ್ದಾರರು ಅರ್ಜಿದಾರರಿಂದ ಪಡಿತರ ಚೀಟಿ, ಆಧಾರ್ ಸಂಖ್ಯೆ, ಚುನಾವಣಾ ಗುರುತಿನ ಚೀಟಿ, ತಹಶೀಲ್ದಾರರಿಂದ ಪಡೆದ ಜಾತಿ ಪ್ರಮಾಣ ಪತ್ರ / ಆದಾಯ ಪ್ರಮಾಣ ಪತ್ರ / ವಾಸಸ್ಥಳ ದೃಢೀಕರಣ ಪತ್ರವನ್ನು, ಗ್ರಾಮ ಆಡಳಿತಾಧಿಕಾರಿ / ರಾಜಸ್ವ ನಿರೀಕ್ಷಕರು / ಶಿರಸ್ತೇದಾರರ ವರದಿಗಳನ್ನು ಹಾಗೂ Karnataka State Remote Sensing Applications Centre (KSRSAC) ನಿಂದ ಉಪಗ್ರಹ ಆಧರಿತ ಚಿತ್ರ (Satellite Image) ಪರಿಗಣಿಸಿ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ತಮ್ಮ ಸ್ಪಷ್ಟ ಅಭಿಪ್ರಾಯವನ್ನು ದಾಖಲಿಸತಕ್ಕದ್ದು.

9. ತಹಶೀಲ್ದಾರರು ಸಮಿತಿಗೆ ತಮ್ಮ ಶಿಫಾರಸ್ಸು ನೀಡುವ ಮುನ್ನ ಈ ಕೆಳಕಂಡ ಅಂಶಗಳಂತೆ ಕ್ರಮವಹಿಸತಕ್ಕದ್ದು.

   ಅ) ಕರ್ನಾಟಕ ಭೂ ಕಂದಾಯ ನಿಯಮ 1966ರ ನಿಯಮ 108(ಐ)ರನ್ವಯ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 71ರ ಪ್ರಕರಣದ ಮೇರೆಗೆ ವಿಶೇಷ ಉದ್ದೇಶಗಳಿಗಾಗಿ ಒಪ್ಪಿಸಿದ ಭೂಮಿಗಳು ಅಂದರೆ, ಗೋಮಾಳ / ಮೀಸಲು ಕಾಡು, ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿರಿಸಿದ

[illegible] ಪಡೆದ [illegible] ನಗರ [illegible] [illegible] ಮಿತಿಗಳಲ್ಲಿ ನಾಗರೀಕರಿಂದ [illegible] ಮತ್ತು ಸಾರ್ವಜನಿಕ ಉದ್ದೇಶಕ್ಕಾಗಿ ಸರ್ಕಾರದ [illegible] [illegible] ಅಂಥ ಭೂಮಿಗಳನ್ನು ಮಂಜೂರಾತಿ ಮಾಡತಕ್ಕದ್ದಲ್ಲ. ನಗರ ಅಥವಾ ಪಟ್ಟಣದ ಪರಿಮಿತಿಯೊಳಗೆ ಸರ್ಕಾರದ ಭೂಮಿಯನ್ನು ಯಾವನೇ ವ್ಯಕ್ತಿ ಅಥವಾ ಖಾಸಗಿ ಸಂಸ್ಥೆಗೆ ಮಂಜೂರಾತಿ ಮಾಡತಕ್ಕದ್ದಲ್ಲ. ಅಂಥ ಎಲ್ಲಾ ಭೂಮಿಗಳನ್ನು ಬೆಳೆಯುತ್ತಿರುವ ಅಥವಾ ಪಟ್ಟಣದ ಸಾರ್ವಜನಿಕ ಅವಶ್ಯಕತೆಗಳಿಗಾಗಿ [illegible] ಅಥವಾ ಸರ್ಕಾರದ ಉದ್ದೇಶಗಳಿಗಾಗಿ ಕಾಯ್ದಿರಿಸತಕ್ಕದ್ದು ಎಂದು ತಿಳಿಸಲಾಗಿದೆ.

b) ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ 168 ಎಲ್‌ಜಿಪಿ 2014, ದಿನಾಂಕ 18.09.2014ರಲ್ಲಿ ತಿಳಿಸಿರುವಂತೆ ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94-ಎ(4)ರಡಿಯಲ್ಲಿ ನಿರ್ಬಂಧಿತ ಅಂತರವನ್ನು ತೀರ್ಮಾನಿಸುವಾಗ ಅನುಸರಿಸಬೇಕಾದ ಕ್ರಮವನ್ನು ಕರ್ನಾಟಕ ಜನರಲ್ ಕ್ಲಾಸ್ ಕಾಯ್ದೆ, 1899ರ ಕಲಂ 11 (Measurement of distances) ರಡಿಯಲ್ಲಿ ವಿವರಿಸಿರುವಂತೆ ಕ್ರಮ ಕೈಗೊಳ್ಳುವುದು. ಅದರ ಉದ್ಧೃತ ಭಾಗ ಈ ಕೆಳಕಂಡಂತೆ ಇದೆ.

> "11: Measurement of distance:- In the measurement of any distance, for the purposes of (any Mysore Act or Karnataka Act) made after the commencement of this Act that distance shall, unless a different intention appears, be measured in a straight line on a horizontal plane"

c) ತಹಶೀಲ್ದಾರರು ಅರ್ಜಿಗಳನ್ನು ಪರಿಶೀಲಿಸುವಾಗ ನಿರ್ಬಂಧಿತ ಅಂತರವನ್ನು ಸರ್ವೆ ಇಲಾಖೆಯಿಂದ ನೀಡಿರುವ ನಿರ್ಬಂಧಿತ ಅಂತರದಲ್ಲಿ ಬರುವ ಗ್ರಾಮಗಳ ಪ್ರಮಾಣೀಕೃತ ಪಟ್ಟಿಯೊಂದಿಗೆ ದೃಢಪಡಿಸಿಕೊಳ್ಳತಕ್ಕದ್ದು.

d) ನಮೂನೆ-50 53 ಮತ್ತು 57ರಲ್ಲಿ ಸಕ್ರಮಾತಿ ಕೋರಿರುವ ಜಮೀನಿನ ಪಹಣಿಯ ಕಾಲಂ 3 ಮತ್ತು 9ರ, ಆಕಾರಬಂದ್‌ನಂತೆ ವಿಸ್ತೀರ್ಣವನ್ನು ತಾಳೆ ಮಾಡಿದ ನಂತರ [illegible] ರಲ್ಲಿ [illegible] ಗುರ್ತಿಸಿ ಮಂಜೂರಾತಿ ನೀಡಿರುವ ವಿಸ್ತೀರ್ಣಕ್ಕೆ [illegible] ರಿಂದ 5 ರವರೆಗಿನ ನಮೂನೆಗಳನ್ನು ಸುತ್ತೋಲೆ ಸಂಖ್ಯೆ: ಕಂದಾಯ ಇಲಾಖೆ ಸುತ್ತೋಲೆ 29/2009 10 ದಿನಾಂಕ: 25.01.2010ರನ್ವಯ ಸಿದ್ದಪಡಿಸಿದ ನಂತರ ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಜಮೀನು ಲಭ್ಯವಿದ್ದಲ್ಲಿ ಮಾತ್ರ ನಮೂನೆ 50 5[illegible] ಹಾಗೂ 57ರ ಅರ್ಜಿಗಳನ್ನು ನಿಯಮಾನುಸಾರ ಸಮಿತಿಯ ಮುಂದೆ ಮಂಡಿಸಲು ಕ್ರಮವಹಿಸತಕ್ಕದ್ದು. ಒಂದು ವೇಳೆ ಜಮೀನು ಲಭ್ಯವಿಲ್ಲದಿದ್ದಲ್ಲಿ ಜಿಲ್ಲಾಧಿಕಾರಿಗಳು ಅರ್ಜಿಯನ್ನು ತಿರಸ್ಕರಿಸತಕ್ಕದ್ದು.

e) ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಜಮೀನನ್ನು ಸಕ್ರಮಗೊಳಿಸ ನಕ್ಷೆ ತಯಾರಿಸುವಾಗ ರಸ್ತೆ ಸಂಪರ್ಕ ಇಲ್ಲದ ಪಕ್ಷದಲ್ಲಿ ಕಡ್ಡಾಯವಾಗಿ ಬಂಡಿದಾರಿ ರಸ್ತೆಗಾಗಿ The Karnataka Revenue Survey Manual ರನ್ವಯ 20

ಅಡಿ ಅಗಲದ ಜಮೀನನ್ನು ಅಥವಾ ರೂಢಿ ದಾರಿ ಇದ್ದಲ್ಲಿ ಇವೆರಡರಲ್ಲಿ ಯಾವುದರ ವಿಸ್ತೀರ್ಣವು ಹೆಚ್ಚೋ ಅಷ್ಟು ವಿಸ್ತೀರ್ಣವನ್ನು ರಸ್ತೆಗಾಗಿ ಗುರುತಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 71ರಡಿ ನಿಯಮಾನುಸಾರ ಜಿಲ್ಲಾಧಿಕಾರಿಗಳು ಕಾಯ್ದಿರಿಸತಕ್ಕದ್ದು.

9. ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್.ಡಿ. 23 ಎಲ್.ಜಿ.ಪಿ. 2016, ದಿನಾಂಕ: 05.12.2016ರಲ್ಲಿ ತಿಳಿಸಿರುವಂತೆ ಯಾವ ಯಾವ ಸರ್ವೆ ನಂಬರ್‌ಗಳಲ್ಲಿ ಕಂದಾಯ ಇಲಾಖೆ ಜಮೀನು ಮತ್ತು ಅರಣ್ಯ ಇಲಾಖೆಗೆ ಸಂಬಂಧಿಸಿ ಜಮೀನುಗಳಿರುತ್ತವೆಯೋ ಅಂತಹ ಜಮೀನುಗಳನ್ನು ಮೊದಲು ನಿಯಮಾನುಸಾರ ಪಕ್ಕಾ ಪೋಡಿ ಮಾಡಿ ಪ್ರತ್ಯೇಕಿಸಿ ಅವುಗಳಿಗೆ ಸರ್ವೆ ನಂಬರ್‌ಗಳನ್ನು ನೀಡುವುದು. ಕಂದಾಯ ಇಲಾಖೆಯ ಜಮೀನುಗಳಾಗಿದ್ದಲ್ಲಿ ಸಾಗುವಳಿ ಮಾಡುತ್ತಿರುವ ಅರ್ಜಿದಾರರ ಅರ್ಹ ಅರ್ಜಿಗಳನ್ನು ನಿಯಮಾನುಸಾರ ಬಗರ್‌ಹುಕುಂ ಸಮಿತಿಯ ಮುಂದೆ ಮಂಡಿಸಲು ಕ್ರಮವಹಿಸತಕ್ಕದ್ದು.

10. ಜಿಲ್ಲಾಧಿಕಾರಿಯು ಅನರ್ಹ ಅರ್ಜಿಯನ್ನು ಒಂದು ತಿಂಗಳೊಳಗಾಗಿ ತಿರಸ್ಕರಿಸತಕ್ಕದ್ದು ಮತ್ತು ಸದರಿ ಅರ್ಜಿಯಲ್ಲಿ ಕೋರಿರುವ ಜಮೀನನ್ನು ಸರ್ಕಾರದ ಸ್ವಾಧೀನಕ್ಕೆ ಪಡೆದುಕೊಳ್ಳಲು ನಿಯಮಾನುಸಾರ ಅಗತ್ಯ ಕ್ರಮವಹಿಸತಕ್ಕದ್ದು.

11. ಬಗರ್ ಹುಕುಂ ಸಮಿತಿ ರಚನೆಯಾದ ನಂತರ ಅಧ್ಯಕ್ಷರು ಹಾಗೂ ಸದಸ್ಯರು ಹಾಗೂ ಸದಸ್ಯ ಕಾರ್ಯದರ್ಶಿಯವರ ಆಧಾರ್ e-KYC ಅನ್ನು ತಂತ್ರಾಂಶದಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು. [illegible] ಆಧಾರ್ e-KYC ನಂತರವೇ ಸಮಿತಿಯ ಸಭೆ ನಡೆಸತಕ್ಕದ್ದು.

12. ಬಗರ್ ಹುಕುಂ ಸಮಿತಿಯು ರಚನೆಯಾದ ನಂತರ ಸಮಿತಿಗಳು ಕನಿಷ್ಠ ವಾರಕ್ಕೊಂದು ಬಾರಿ ಸಭೆ ಸೇರಿ ಬಾಕಿ ಇರುವ ಅರ್ಜಿಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸಲು ಸಮಿತಿಯ ಕಾರ್ಯದರ್ಶಿಯವರು ಕ್ರಮವಹಿಸತಕ್ಕದ್ದು.

13. ಸಮಿತಿಯು ಅರ್ಜಿಗಳನ್ನು ಇತ್ಯರ್ಥಪಡಿಸುವಾಗ ಸಾಗುವಳಿ ಮಾಡಿರುವ ಬಗ್ಗೆ, ಬಗರ್ ಹುಕುಂ ತಂತ್ರಾಂಶದಲ್ಲಿ ಲಭ್ಯವಿರುವ Karnataka State Remote Sensing Applications Centre (KSRSAC) ನಿಂದ ಪಡೆದ ಉಪಗ್ರಹ ಆಧಾರಿತ ಚಿತ್ರ (Satellite Image)ಗಳನ್ನು ಪರಿಗಣಿಸತಕ್ಕದ್ದು.

14. ಸಮಿತಿಯು ಕರ್ನಾಟಕ ಭೂ ಕಂದಾಯ ನಿಯಮಗಳು, 1966 ನಿಯಮ 108 (ಎಫ್) ರಡಿ ಮಂಜೂರಾತಿಗೆ ಈ ಕೆಳಕಂಡ ಅರ್ಹತೆಯನ್ನು ಹೊಂದಿರುವ ಬಗ್ಗೆ ಪರಿಶೀಲಿಸತಕ್ಕದ್ದು.

    i. ಅನಧಿಕೃತವಾಗಿ ಸಾಗುವಳಿ ಮಾಡುವ ಅವಧಿಗೆ ಅರ್ಜಿದಾರನಿಗೆ ಹದಿನೆಂಟು ವರ್ಷವಾಗಿರಬೇಕು;
    ii. ಅವನು ಭೂಮಿಯು ಇರುವ ಅಥವಾ ಪಕ್ಕದಲ್ಲಿರುವ ತಾಲ್ಲೂಕಿನಲ್ಲಿ ತಾಲ್ಲೂಕಿನ ಪರಿಮಿತಿಯೊಳಗೆ ಖಾಯಂ ನಿವಾಸಿಯಾಗಿರಬೇಕು;

iii. [illegible]
[illegible]
[illegible] ಮತ್ತು
ಪಡೆಯುವುದರಿಂದ ನಿಷೇಧಿಸಲಾಗತಕ್ಕದ್ದಲ್ಲ.

iv. ನಮೂನೆ-50 ಮತ್ತು 53ರ ಅರ್ಜಿಗಳನ್ನು ಪರಿಗಣಿಸುವಾಗ ಅರ್ಜಿದಾರನು ಕನಿಷ್ಠಪಕ್ಷ ಏಪ್ರಿಲ್ 1990ರ ದಿನಕ್ಕೆ ಕಡೆಯಪಕ್ಷ ಹಿಂದಿನ ಮೂರು ವರ್ಷಗಳು ಕಡಿಮೆಯಿಲ್ಲದ ಅವಧಿಯ ನಿರಂತರ ಭೂಮಿಯು ಅನಧಿಕೃತ ಅನುಭೋಗವಾಗಿರಬೇಕು.

v. ನಮೂನೆ 57ರ ಅರ್ಜಿಗಳನ್ನು ಪರಿಗಣಿಸುವಾಗ ಅರ್ಜಿದಾರನು [illegible] ಮೊದಲ ದಿನಕ್ಕೆ ಮುಂಚಿತ [illegible] ಕಡಿಮೆ ಇಲ್ಲದ ಅವಧಿಯವರೆಗೆ ನಿರಂತರವಾಗಿ ಅನಧಿಕೃತ ಸಾಗುವಳಿ ಮಾಡುತ್ತಿರಬೇಕು.

vi. ಅನುಸೂಚಿತ ಜಾತಿ ಮತ್ತು ಪಂಗಡಗಳಿಗೆ ಸೇರಿದ ವ್ಯಕ್ತಿಗಳ ಸಂದರ್ಭದಲ್ಲಿ ಅಂತಹ ಅವಧಿಯು ಒಂದು ವರ್ಷಕ್ಕಿಂತ ಕಡಿಮೆ ಇರತಕ್ಕದ್ದಲ್ಲ.

15. ಬಗರ್ ಹುಕುಂ ಸಕ್ರಮೀಕರಣ ಸಮಿತಿಯು ಅರ್ಜಿದಾರರು ಈಗಾಗಲೇ ಹೊಂದಿರುವ ಭೂಮಿಯ ಜೊತೆಗೆ ಹಾಗೇ ಮಂಜೂರಾದ ಭೂಮಿಯು 'ಡಿ' ದರ್ಜೆ ಭೂಮಿ ಅಥವಾ ಅದಕ್ಕೆ ಸಮನಾದ ಭೂಮಿಯು ಐದು ಹೆಕ್ಟೇರ್ ಮೀರದಂತೆ ಸಕ್ರಮಗೊಳಿಸಲು ನಿಯಮಾನುಸಾರ ಕ್ರಮವಹಿಸತಕ್ಕದ್ದು.

16. ಸಮಿತಿಯು ಅಥವಾ ಹೆಚ್ಚುವರಿ ಸಮಿತಿಯು ಪ್ರಸ್ತಾವನೆಯನ್ನು ಪರಿಶೀಲಿಸಿ ವಿಚಾರಣೆಗೊಳಪಡಿಸಿದ ನಂತರ ಹಕ್ಕನ್ನು ಹೊಂದಿರುವ ಅರ್ಜಿದಾರರಿಗೆ ಅರ್ಹವಾದ ಭೂಮಿಯನ್ನು ಮಂಜೂರು ಮಾಡಲು ಅವಶ್ಯಕವೆಂದು ಪರಿಗಣಿಸಿದ್ದಲ್ಲಿ, ಭೂಮಿಯ ವಿಸ್ತೀರ್ಣವನ್ನು ಮತ್ತು ಭೂಮಿಯ ಮಂಜೂರಾತಿಗೆ ಅವನಿಂದ ಸಂದಾಯವಾಗಬೇಕಾದ ಮೊಬಲಗನ್ನು ನಿರ್ಧರಿಸತಕ್ಕದ್ದು, ಹಾಗೂ ಉದ್ದೇಶಿತ ಮಂಜೂರಾತಿಗಾಗಿ ಹಿತಾಸಕ್ತಿಯುಳ್ಳ ವ್ಯಕ್ತಿಗಳಿಂದ 15 ದಿನಗಳೊಳಗೆ ಆಕ್ಷೇಪಣೆಗಳನ್ನು ಆಹ್ವಾನಿಸಲು ಗ್ರಾಮದ ಚಾವಡಿಯಲ್ಲಿ ಮತ್ತು ಗ್ರಾಮ ಪಂಚಾಯಿತಿಯ ಕಛೇರಿಯಲ್ಲಿ ನಿರ್ದಿಷ್ಟಪಡಿಸಿದ ನಮೂನೆಯಲ್ಲಿ ನಿಯಮಾನುಸಾರ ನೋಟೀಸನ್ನು ಪ್ರಕಟಿಸತಕ್ಕದ್ದು.

ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಅವಧಿ ಮುಗಿದ ನಂತರ ಸಮಿತಿಯು ಅಥವಾ ಹೆಚ್ಚುವರಿ ಸಮಿತಿಯು ಸ್ವೀಕರಿಸಿದ ಆಕ್ಷೇಪಣೆಗಳನ್ನು ಪರಿಗಣಿಸಿ ಆಲೋಚಿಸಿದ ನಂತರ ಆವಶ್ಯಕತೆ ಇದ್ದಲ್ಲಿ ಹೆಚ್ಚಿನ ವಿಚಾರಣೆ ಮಾಡಿದ ನಂತರ ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಭೂಮಿಗೆ ಅಗತ್ಯವಾದ ಶಿಫಾರಸ್ಸು ಮಾಡುವುದು ಅಥವಾ ಅದನ್ನು ವಜಾಗೊಳಿಸತಕ್ಕದ್ದು. ಸಮಿತಿಯ ತೀರ್ಮಾನವನ್ನು ಬಗರ್ ಹುಕುಂ ತಂತ್ರಾಂಶದಲ್ಲಿ ಅಧ್ಯಕ್ಷರ ಹಾಗೂ ಎಲ್ಲಾ ಸದಸ್ಯರುಗಳ Aadhaar Based e Sign ಪಡೆಯುವುದರ ಮೂಲಕ ನಮೂದಿಸತಕ್ಕದ್ದು.

18. ಸಮಿತಿಯ ತೀರ್ಮಾನದಂತೆ ಪರ ಕಾಲದಲ್ಲಿ ಸದಸ್ಯ ಕಾರ್ಯದರ್ಶಿಗಳಾದ ತಹಶೀಲ್ದಾರರು ನಿಗದಿತ ಮೊಬಲಗನ್ನು ಸಂದಾಯ ಮಾಡಲು ಅರ್ಜಿ

ಅರ್ಜಿದಾರರಿಗೆ ತಿಳಿಸತಕ್ಕದ್ದು, ಹಾಗೂ ನಮೂನೆ 1 ರಿಂದ ನಮೂನೆ-5 ನಕ್ಷೆ ಮತ್ತು ಮಂಜೂರಾತಿ ಜ್ಞಾಪನದೊಂದಿಗೆ ಪೋಡಿಗಾಗಿ ಹೊಸ ನಂಬರ್ ನೀಡಲು ತಂತ್ರಾಂಶದ ಮೂಲಕ ಮಾಹಿತಿಯನ್ನು ಸರ್ವೆ ಇಲಾಖೆಗೆ ಸಲ್ಲಿಸತಕ್ಕದ್ದು.

19. ಸರ್ವೆ ಇಲಾಖೆಯವರು ಒಂದು ಸರ್ವೆ ನಂಬರಿನಲ್ಲಿ ಈ ಹಿಂದೆ ಮಂಜೂರಾಗಿ ಪೋಡಿಯಾಗದೇ ಬಾಕಿ ಉಳಿದಿರುವ ಎಲ್ಲಾ ದರಖಾಸ್ತ್ ಮಂಜೂರಾತಿ ಜಮೀನುಗಳನ್ನು ಹಾಗೂ ಕಂಡಿಕೆ-18ರಲ್ಲಿ ತಿಳಿಸಿರುವಂತೆ ಅನಧಿಕೃತ ಸಾಗುವಳಿ ಸಕ್ರಮಕ್ಕೆ ಸಲ್ಲಿಸಲಾಗಿರುವ ಎಲ್ಲಾ ಪೋಡಿ ಪ್ರಕರಣಗಳನ್ನು ಏಕ ಕಾಲದಲ್ಲಿ ಪೋಡಿ ಮಾಡತಕ್ಕದ್ದು.

20. ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 94ಎ, ಕಲಂ 94ಬಿ ಹಾಗೂ ಕಲಂ 94ಎ(4) ಪ್ರಕರಣಗಳ ಮೇರೆಗೆ ಮಂಜೂರಾಗಿರುವ ಭೂ ಮಂಜೂರಾತಿಗೆ ಅನುಸಾರವಾಗಿ ಕರ್ನಾಟಕ ಭೂ ಕಂದಾಯ ನಿಯಮಗಳು, 1966 ನಿಯಮ 108-ಜಿ ರಡಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಮೊಬಲಗನ್ನು ಸಂದಾಯ ಮಾಡಲು ವಿನಾಯಿತಿ ನೀಡಲಾಗಿದೆ. ಉಳಿದ ಪ್ರಕರಣಗಳಲ್ಲಿ ಮೊದಲನೇ ಕಂತನ್ನು ಸಂದಾಯ ಮಾಡತಕ್ಕದ್ದು. ಮೊದಲನೇ ಕಂತಿನ ಸಂದಾಯಕ್ಕಾಗಿ ನಿಗದಿಯಾದ ಮುಕ್ತಾಯವಾಗುವ ಕೊನೆಯ ದಿನಾಂಕದಿಂದ 60 ದಿವಸಗಳೊಳಗೆ ಬಾಕಿ ಮೊಬಲಗನ್ನು ಎರಡು ಕಂತುಗಳಲ್ಲಿ ಸಂದಾಯ ಮಾಡತಕ್ಕದ್ದು. e-challan ಮೂಲಕ ಸಂದಾಯ ಮಾಡಿದ ಮೊಬಲಗಿನ ರಶೀದಿಯನ್ನು ಕಡ್ಡಾಯವಾಗಿ ತಂತ್ರಾಂಶದಲ್ಲಿ upload ಮಾಡತಕ್ಕದ್ದು.

21. ಸರ್ವೆ ಇಲಾಖೆಯವರು ಜಮೀನಿಗೆ ಸಂಬಂಧಿಸಿದಂತೆ ಎಲ್ಲಾ ಪೋಡಿ / ದುರಸ್ತಿ ಪ್ರಕ್ರಿಯೆಯನ್ನು ಒಂದು ವಾರದೊಳಗೆ ಪೂರ್ಣಗೊಳಿಸಿ ಹೊಸ ಸರ್ವೆ ನಂಬರ್ ರೊಂದಿಗೆ ಕಡತವನ್ನು ತಹಶೀಲ್ದಾರವರ ಕಛೇರಿಗೆ ಹಿಂದಿರುಗಿಸತಕ್ಕದ್ದು. ತಹಶೀಲ್ದಾರವರು ಕಡತ ಸ್ವೀಕರಿಸಿದ ಏಳು ದಿನಗಳೊಳಗಾಗಿ ದುರಸ್ತಿಪಡಿಸಿದ ಜಮೀನಿಗೆ ಸಂದಾಯವಾಗಬೇಕಾಗಿರುವ ಮೊಬಲಗನ್ನು ಪಾವತಿಸಿರುವ ಬಗ್ಗೆ ಪರಿಶೀಲಿಸಿಕೊಂಡು ಹೊಸ ಸರ್ವೆ ನಂಬರ್ ಅನ್ನು ಅಳವಡಿಸಿ Bar Coded e-ಸಾಗುವಳಿ ಚೀಟಿಯನ್ನು ನೀಡತಕ್ಕದ್ದು. ತಹಶೀಲ್ದಾರರು Bar Coded e-ಸಾಗುವಳಿ ಚೀಟಿಯಂತೆ ಸದರಿ ಜಮೀನನ್ನು ಒಂದು ವಾರದೊಳಗಾಗಿ ಉಪ ನೋಂದಣಾಧಿಕಾರಿ ಕಛೇರಿಯಲ್ಲಿ ನೋಂದಣಿ ಮಾಡಿಕೊಡತಕ್ಕದ್ದು.

22. ನೋಂದಣಿಯಾದ ದಾಖಲೆಯ ಮೇರೆಗೆ ಒಂದು ವಾರದೊಳಗಾಗಿ ಸರ್ವೆ ದಾಖಲೆಗಳಲ್ಲಿ ಮಾಲೀಕತ್ವದ ಬಗ್ಗೆ ಹಾಗೂ ಪಹಣಿಯಲ್ಲಿ ಸೂಕ್ತ ಇಂಡೀಕರಣಕ್ಕಾಗಿ ಅನುಕ್ರಮವಾಗಿ ಸರ್ವೆ ಇಲಾಖೆ ಹಾಗೂ ಕಂದಾಯ ಇಲಾಖೆಯವರು ಸೂಕ್ತ ಕ್ರಮವಹಿಸತಕ್ಕದ್ದು.

23. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸಕ್ರಮಗೊಳಿಸಿರುವ ಜಮೀನುಗಳನ್ನು ಕಡ್ಡಾಯವಾಗಿ ಪಿ.ಟಿ.ಸಿ.ಎಲ್ ಕಾಯ್ದೆಯಡಿ ಪರಭಾರೆ ನಿಷೇಧ ಜಮೀನು ಎಂದು ಭೂಮಿ ತಂತ್ರಾಂಶದಲ್ಲಿ "ಫ್ಲ್ಯಾಗ್" ಮಾಡತಕ್ಕದ್ದು ಹಾಗೂ ಸಾಮಾನ್ಯ ವರ್ಗದವರಿಗೆ ಸಕ್ರಮಗೊಳಿಸಿರುವ ಜಮೀನುಗಳನ್ನು ಪರಭಾರೆ ನಿಷೇಧ ಅವಧಿಯನ್ನು ಭೂಮಿ ತಂತ್ರಾಂಶದಲ್ಲಿ "ಫ್ಲ್ಯಾಗ್" ಮಾಡತಕ್ಕದ್ದು.

24. [illegible] ಮಂಜೂರಾತಿ ಆದೇಶವನ್ನು ಹಾಗೂ/ಅಥವಾ ಮಂಜೂರಾತಿ ಪ್ರಮಾಣ ಪತ್ರ ನೀಡಿದ ದಿನಾಂಕದಿಂದ 25 ವರ್ಷಗಳ ಅವಧಿಯವರೆಗೆ ಭೂಮಿಯನ್ನು ಪರಭಾರೆ ಮಾಡತಕ್ಕದ್ದಲ್ಲ ಅಥವಾ ಅದನ್ನು ವ್ಯವಸಾಯೇತರ ಉದ್ದೇಶಗಳಿಗೆ ಉಪಯೋಗಿಸತಕ್ಕದ್ದಲ್ಲ.

25. ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 108-ಜೆ ರಡಿ ಮಂಜೂರಾತಿ ನಿಯಮಗಳ [illegible] ಉಲ್ಲಂಘಿಸಿದಲ್ಲಿ ಮಂಜೂರಾತಿಯನ್ನು ರದ್ದುಪಡಿಸಿ [illegible] ನಿಯಮಾನುಸಾರ ಉಪವಿಭಾಗಾಧಿಕಾರಿಗಳು ಸದರಿ ಜಮೀನನ್ನು ಸರ್ಕಾರಕ್ಕೆ ಮರುಸ್ವಾಧೀನ ಪಡೆದುಕೊಳ್ಳತಕ್ಕದ್ದು.

26. ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 108-ಕೆ ರಡಿ ಭೂಮಿಯ ಯಾವುದೇ ಮಂಜೂರಾತಿಯು ಸುಳ್ಳು ಅಥವಾ ಮೋಸದ ನಿವೇದನೆಯ ನಟನೆಯಿಂದ ಅಥವಾ ನಿಯಮಗಳಿಗೆ ವಿರುದ್ಧವಾಗಿ ಮಂಜೂರಾತಿಯನ್ನು ಪಡೆದಿದ್ದರೆ ಮಂಜೂರಾತಿದಾರನ ಅಹವಾಲನ್ನು ಆಲಿಸಿದ ನಂತರ ಉಪವಿಭಾಗಾಧಿಕಾರಿಗಳು ನಿಯಮಾನುಸಾರ ಸದರಿ ಜಮೀನನ್ನು ಸರ್ಕಾರಕ್ಕೆ ಮರುಸ್ವಾಧೀನ ಪಡೆದುಕೊಳ್ಳತಕ್ಕದ್ದು.

ಈ ಮೇಲ್ಕಂಡ ಎಲ್ಲಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಹಾಗೂ ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಸರ್ಕಾರವು ನೀಡಿರುವ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಈ ಕಾರ್ಯದಲ್ಲಿ ಯಾವುದೇ ದೂರುಗಳಿಗೆ ಆಸ್ಪದ ನೀಡದಂತೆ ಸಂಪೂರ್ಣ ಪಾರದರ್ಶಕತೆಯನ್ನು ಪಾಲಿಸತಕ್ಕದ್ದು. ಯಾವುದೇ ಅಧಿಕಾರಿಗಳ/ನೌಕರರ ಲೋಪವನ್ನು ಸರ್ಕಾರವು ತೀವ್ರ ಗಂಭೀರವಾಗಿ ಪರಿಗಣಿಸಲಾಗುವುದೆಂದು ಹಾಗೂ ಅವರ ವಿರುದ್ಧ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 35 ಹಾಗೂ ಕಲಂ 192(ಎ)ರಡಿ ಸೂಕ್ತ ಕ್ರಮ ಹಾಗೂ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದೆಂದು ಈ ಮೂಲಕ ತಿಳಿಸಿದೆ.

(ರಾಜೇಂದರ್ ಕುಮಾರ್ ಕಟಾರಿಯಾ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಕಂದಾಯ ಇಲಾಖೆ.

ಇವರಿಗೆ

1. ಆಯುಕ್ತರು, ಕಂದಾಯ ಆಯುಕ್ತಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು.
2. ಎಲ್ಲಾ ಪ್ರಾದೇಶಿಕ ಆಯುಕ್ತರುಗಳು
3. ಆಯುಕ್ತರು, ಭೂ ಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ
4. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು
5. ಎಲ್ಲಾ ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂದಾಖಲೆಗಳ ಉಪ ನಿರ್ದೇಶಕರು.
6. ರಾಜ್ಯದ ಎಲ್ಲಾ ಉಪವಿಭಾಗಾಧಿಕಾರಿಗಳು (ಜಿಲ್ಲಾಧಿಕಾರಿಗಳ ಮುಖಾಂತರ)
7. ರಾಜ್ಯದ ಎಲ್ಲಾ ತಹಶೀಲ್ದಾರರುಗಳು (ಜಿಲ್ಲಾಧಿಕಾರಿಗಳ ಮುಖಾಂತರ)
8. ಹೆಚ್ಚುವರಿ ಪ್ರತಿ/ಶಾಖಾ ರಕ್ಷಾ ಕಡತ

**ಪ್ರತಿಯನ್ನು ಮಾಹಿತಿಗಾಗಿ**

1. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.

2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ, ಆಪ್ತ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕಂದಾಯ ಇಲಾಖೆ (ಭೂ ಮಂಜೂರಾತಿ & ಭೂ ಸುಧಾರಣೆ)
4. ಸರ್ಕಾರದ ಉಪಕಾರ್ಯದರ್ಶಿಯವರ ಆಪ್ತ ಸಹಾಯಕರು ಕಂದಾಯ ಇಲಾಖೆ (ಸಮನ್ವಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಸರ್ಕಾರದ ಅಧೀನ ಕಾರ್ಯದರ್ಶಿ, ಭೂ ಮಂಜೂರಾತಿ-1 ಮತ್ತು ಭೂ ಮಂಜೂರಾತಿ-3 /ಪೀಠಾಧಿಕಾರಿಗಳು, ಭೂ ಮಂಜೂರಾತಿ-2, ಬಹುಮಹಡಿಗಳ ಕಟ್ಟಡ, ಬೆಂಗಳೂರು.

****

**ಕರ್ನಾಟಕ ಸರ್ಕಾರ**

ಸಂಖ್ಯೆ:ಆರ್‌ಡಿ 203 ಎಂಆರ್‌ಆರ್ 2025

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 29.08.2025

## ಅಧಿಸೂಚನೆ

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (1964 ರ ಕರ್ನಾಟಕ ಅಧಿನಿಯಮ 12) ರ ವಿವಿಧ ನಿಬಂಧನೆಗಳ ಅಡಿಯಲ್ಲಿ ಮನವಿಗಳು, ಅರ್ಜಿಗಳು, ಮೇಲ್ಮನವಿಗಳು, ಎರಡನೇ ಮೇಲ್ಮನವಿಗಳು, ವಿಮರ್ಶೆಗಳು, ಪರಿಷ್ಕರಣೆಗಳು ಮತ್ತು ಇತರ ವಿಚಾರಣೆಗಳನ್ನು ಕಂದಾಯ ನ್ಯಾಯಾಲಯಗಳು, ಕಂದಾಯ ಅಧಿಕಾರಿಗಳು ಮತ್ತು ಇತರ ಸಕ್ಷಮ ಪ್ರಾಧಿಕಾರಿಗಳ ಮುಂದೆ ಸಲ್ಲಿಸಲು ಅವಕಾಶವಿರುತ್ತದೆ;

ಪಾರದರ್ಶಕತೆ, ದಕ್ಷತೆ, ಸಕಾಲಿಕ ವಿಲೇವಾರಿ ಮತ್ತು ಲಭ್ಯತೆಯ ಹಿತದೃಷ್ಟಿಯಿಂದ ಡಿಜಿಟಲ್ ಸಹಿ ಅಥವಾ ಸಮಾನವಾದ ಕಾನೂನುಬದ್ಧವಾಗಿ ಗುರುತಿಸಲ್ಪಟ್ಟ ಎಲೆಕ್ಟ್ರಾನಿಕ್ ವಿಧಾನಗಳಿಂದ ದೃಢೀಕರಣದೊಂದಿಗೆ ಕೇಂದ್ರೀಕೃತ ವೇದಿಕೆಯ ಮೂಲಕ ಅಂತಹ ಎಲ್ಲಾ ಪ್ರಕ್ರಿಯೆಗಳ ಆನ್‌ಲೈನ್ ಫೈಲಿಂಗ್ ಮತ್ತು ಎಲೆಕ್ಟ್ರಾನಿಕ್ ನಿರ್ವಹಣೆಯನ್ನು ಒದಗಿಸುವುದು ಸೂಕ್ತವೆಂದು ಪರಿಗಣಿಸಲಾಗಿದೆ;

ಆದ್ದರಿಂದ, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ರ ಕಲಂ 197 ಮತ್ತು 201 ಹಾಗೂ ಇತರೆ ಉಪಬಂಧಗಳಲ್ಲಿ ಒದಿಕೊಂಡಂತೆ ಮತ್ತು ಸದರಿ ಕಾಯ್ದೆ ಅಡಿಯಲ್ಲಿ ರಚಿಸಲಾದ ನಿಯಮಗಳಲ್ಲಿನ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಗಿನಂತೆ ಅಧಿಸೂಚನೆ ಹೊರಡಿಸುತ್ತದೆ.

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ :**

(1) ಈ ಅಧಿಸೂಚನೆಯನ್ನು ಕರ್ನಾಟಕ ಕಂದಾಯ ನ್ಯಾಯಾಲಯದ ನಡವಳಿಗಳು (ಆನ್‌ಲೈನ್ ಸಲ್ಲಿಕೆ, ಡಿಜಿಟಲ್ ದೃಢೀಕರಣ ಮತ್ತು ಡಿಜಿಟಲೀಕರಣ) ಅಧಿಸೂಚನೆ, 2025 ಎಂದು ಕರೆಯತಕ್ಕದ್ದು.

(2) ಇದು ಅಧಿಕೃತ ರಾಜ್ಯಪತ್ರದಲ್ಲಿ ಅಂತಿಮ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು:**

(1) "ಅಧಿನಿಯಮ" ಎಂದರೆ, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964.

(2) 'RCCMS' ಎಂದರೆ, ಕರ್ನಾಟಕ ಸರ್ಕಾರದ ಕಂದಾಯ ಇಲಾಖೆಯಿಂದ ನಿರ್ವಹಿಸುವ ಕಂದಾಯ ನ್ಯಾಯಾಲಯ ಪ್ರಕರಣಗಳ ಮೇಲ್ವಿಚಾರಣಾ ವ್ಯವಸ್ಥೆ

(3) 'ಇ-ಸಹಿ' ಎಂದರೆ, ಸರ್ಕಾರದಿಂದ RCCMS ವ್ಯವಸ್ಥೆಗಾಗಿ ಅಧಿಸೂಚಿತವಾಗಿರುವ ಮತ್ತು ಮಾಹಿತಿ ತಂತ್ರಜ್ಞಾನ ಕಾಯ್ದೆ-2000 ರ ಅಡಿಯಲ್ಲಿ ನೀಡಲಾದ ಅಧಿಕೃತ ಡಿಜಿಟಲ್ ಸಹಿ ಪ್ರಮಾಣ ಪತ್ರವನ್ನು ಒಳಗೊಂಡಿರುತ್ತದೆ

(4) "ಕಂದಾಯ ನ್ಯಾಯಾಲಯ" ಎಂದರೆ ಅಧಿನಿಯಮದಡಿ ಕಂದಾಯ ನ್ಯಾಯಾಲಯಗಳನ್ನು ನಡೆಸುವ ಕಂದಾಯ ಆಯುಕ್ತರು, ಪ್ರಾದೇಶಿಕ ಆಯುಕ್ತರು, ಜಿಲ್ಲಾಧಿಕಾರಿಗಳು, ವಿಶೇಷ ಜಿಲ್ಲಾಧಿಕಾರಿಗಳು, ಸಹಾಯಕ ಆಯುಕ್ತರು, ವಿಶೇಷ ಸಹಾಯಕ ಆಯುಕ್ತರು, ತಹಶೀಲ್ದಾರರು ಮತ್ತು ವಿಶೇಷ ತಹಶೀಲ್ದಾರರನ್ನು ಹಾಗೂ ಅಧಿನಿಯಮದಲ್ಲಿ ವ್ಯಾಖ್ಯಾನಿಸಿರುವುದನ್ನು ಒಳಗೊಂಡಿರುತ್ತದೆ.

3. **ವ್ಯಾಪ್ತಿ ಮತ್ತು ಅನ್ವಯಿಸುವಿಕೆ:**

(1) ಈ ಅಧಿಸೂಚನೆಯು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ಮತ್ತು ಅದರಡಿ ರೂಪಿಸಿದ ನಿಯಮಗಳನ್ವಯ ಸಲ್ಲಿಸಲ್ಪಡುವ ಎಲ್ಲಾ ಮನವಿಗಳು, ಅರ್ಜಿಗಳು, ಮೇಲ್ಮನವಿಗಳು, ಎರಡನೇ ಮೇಲ್ಮನವಿಗಳು, ಪುನರ್ ಪರಿಶೀಲನೆಗಳು, ಪರಿಷ್ಕರಣೆಗಳು, ಆಕ್ಷೇಪಣೆಗಳು ಹಾಗೂ ಹೇಳಿಕೆಗಳಿಗೆ ಅನ್ವಯಿಸುತ್ತದೆ.

(2) ಕಂದಾಯ ಅಧಿಕಾರಿಗಳು ವಿಚಾರಣೆಯನ್ನು ನಡೆಸಲು ಅಧಿಕಾರ ಹೊಂದಿರುವ ಯಾವುದೇ ಕಾಯ್ದೆ ಅಥವಾ ನಿಯಮಗಳು ಮತ್ತು ಇತರ ದಾಖಲಾತಿಗಳಿಗೆ ಅನ್ವಯಿಸುತ್ತದೆ.

4. **ಡಿಜಿಟಲ್ ದೃಢೀಕರಣ**

(1) ಕಂದಾಯ ಇಲಾಖೆಯಿಂದ ಅಳವಡಿಸಲಾಗಿರುವ ಕಂದಾಯ ನ್ಯಾಯಾಲಯ ಪ್ರಕರಣಗಳ ಮೇಲ್ವಿಚಾರಣಾ ವ್ಯವಸ್ಥೆ (ಆರ್.ಸಿ.ಸಿ.ಎಂ.ಎಸ್)ಯನ್ನು ಈ ಕೆಳಗಿನ ಅಂಶಗಳಿಗೆ ಅಧಿಕೃತಗೊಳಿಸಲಾಗಿದೆ:

a) ಈ ಮೇಲಿನ ಕಂಡಿಕೆ-3 ರ ಅಡಿಯಲ್ಲಿ ಬರುವ ಎಲ್ಲಾ ನಡವಳಿಗಳ ದಾಖಲು;

b) ಪ್ರತ್ಯುತ್ತರಗಳು, ಪ್ರತಿ-ಹೇಳಿಕೆಗಳು, ಪುರಾವೆಗಳು ಮತ್ತು ಪೂರಕ ದಾಖಲೆಗಳ ಸಲ್ಲಿಕೆ;

c) ನೋಟಿಸ್‌ಗಳು ಮತ್ತು ಆದೇಶಗಳನ್ನು ಜಾರಿಗೊಳಿಸುವುದು.

d) ಪ್ರಕರಣದ ಡೈರಿ ನವೀಕರಣ, ಹಿಂದೂಡಿಕೆ, ಮುಂದೂಡಿಕೆ
e) ಪ್ರಕರಣದ ಸ್ಥಿತಿ, ವಿಚಾರಣೆಯ ವೇಳಾಪಟ್ಟಿಗಳು, ಆದೇಶಗಳು ಮತ್ತು ತೀರ್ಪುಗಳ ವೀಕ್ಷಣೆ

(2) ಕಂಡಿಕೆ - 6 ರಲ್ಲಿನ ವಿಧಾನದಂತೆ, ಆರ್.ಸಿ.ಸಿ.ಎಂ.ಎಸ್ ಮೂಲಕ ಪ್ರಕರಣ ದಾಖಲಿಸುವುದನ್ನು ಕರ್ನಾಟಕ ಭೂಕಂದಾಯ ಅಧಿನಿಯಮ, 1964 ರ ಅಡಿಯಲ್ಲಿ ಮಾನ್ಯ ಮತ್ತು ಸರಿಯಾದ ಸಲ್ಲಿಕೆ ಎಂದು ಪ್ರಾಧಿಕರಿಸುತ್ತದೆ.

**5. ಭೌತಿಕ ದಾಖಲಾತಿಗೆ ಸಮಾನತೆ:**

ಈ ಅಧಿಸೂಚನೆಗೆ ಅನುಗುಣವಾಗಿ ಆರ್.ಸಿ.ಸಿ.ಎಂ.ಎಸ್ ಮೂಲಕ ದಾಖಲಾದ, ದೃಢೀಕರಿಸಲಾದ ಮತ್ತು ದಾಖಲಿಸಲಾದ ಎಲ್ಲಾ ಪ್ರಕ್ರಿಯೆಗಳು ಭೌತಿಕ ರೂಪದಲ್ಲಿ ಸಲ್ಲಿಸಲಾದ, ದೃಢೀಕರಿಸಲಾದ ಮತ್ತು ದಾಖಲಿಸಲಾದ ಪ್ರಕ್ರಿಯೆಗಳಂತೆಯೇ ಕಾನೂನು ಸಿಂಧುತ್ವ ಮತ್ತು ಸಾಕ್ಷ್ಯಾಧಾರದ ಮೌಲ್ಯವನ್ನು ಹೊಂದಿರುತ್ತವೆ.

**6. ಭೌತಿಕ ದಾಖಲಾತಿಗಳ ಡಿಜಿಟಲೀಕರಣ**

(1) ಯಾವುದೇ ಮನವಿ, ಅರ್ಜಿ, ಮೇಲ್ಮನವಿ ಅಥವಾ ಇತರ ಪ್ರಕ್ರಿಯೆಗಳನ್ನು ಭೌತಿಕ ರೂಪದಲ್ಲಿ ಸಲ್ಲಿಸಿದಾಗ, ಸ್ವೀಕರಿಸುವ ಕಚೇರಿಯು ಎಲ್ಲಾ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಆರ್‌ಸಿಸಿಎಂಎಸ್‌ಗೆ ಡಿಜಿಟಲೀಕರಣಗೊಳಿಸತಕ್ಕದ್ದು ಮತ್ತು ಪ್ರಕರಣವನ್ನು ಸಂಬಂಧಪಟ್ಟ ಕಂದಾಯ ನ್ಯಾಯಾಲಯ ಅಥವಾ ಕಂದಾಯ ಅಧಿಕಾರಿಯ ಮುಂದೆ ಇಡುವ ಮೊದಲು ಅದನ್ನು ಆರ್‌ಸಿಸಿಎಂಎಸ್‌ಗೆ ಅಪ್‌ಲೋಡ್ ಮಾಡತಕ್ಕದ್ದು.

(2) ಕೌಂಟರ್ ನಲ್ಲಿ ಸ್ವೀಕೃತಗೊಂಡ ಮನವಿ, ಮೇಲ್ಮನವಿ, ಪುನರ್ ಪರಿಶೀಲನಾ ಅರ್ಜಿಗಳನ್ನು ಡಿಜಿಟಲೀಕರಣಗೊಳಿಸತಕ್ಕದ್ದು ಮತ್ತು ಕೂಡಲೇ ಅಪ್‌ಲೋಡ್ ಮಾಡತಕ್ಕದ್ದು. ಆರ್‌ಸಿಸಿಎಂಎಸ್‌ರಲ್ಲಿನ ಸ್ವೀಕೃತಿಯು ದಾಖಲಾಗಿರುವುದಕ್ಕೆ ಪುರಾವೆಯಾಗಿರತಕ್ಕದ್ದು.

(3) ಡಿಜಿಟಲೀಕರಿಸಿದ ದಾಖಲೆಯನ್ನು ವಿಚಾರಣೆ, ಉಲ್ಲೇಖ ಮತ್ತು ಸಂರಕ್ಷಣೆಯ ಎಲ್ಲಾ ಉದ್ದೇಶಗಳಿಗಾಗಿ ಅಧಿಕೃತ ಪ್ರಕರಣ ದಾಖಲೆಯಾಗಿ ಪರಿಗಣಿಸತಕ್ಕದ್ದು.

**7. ಡಿಜಿಟಲ್ ದೃಢೀಕರಣ ಮತ್ತು ಪ್ರಕರಣದ ದಾಖಲೆಗಳು:**

(1) ಈ ಅಧಿಸೂಚನೆಯ ಅಡಿಯಲ್ಲಿ ಎಲ್ಲಾ ಆನ್‌ಲೈನ್ ಫೈಲಿಂಗ್‌ಗಳನ್ನು ಇವರಿಂದ ದೃಢೀಕರಿಸತಕ್ಕದ್ದು.

a) ಮಾಹಿತಿ ತಂತ್ರಜ್ಞಾನ ಕಾಯ್ದೆ- 2000 ರ ಅಡಿಯಲ್ಲಿ ನೀಡಲಾದ ಅಧಿಕೃತ ಡಿಜಿಟಲ್ ಸಹಿ ಪ್ರಮಾಣಪತ್ರ (DSC) ಅಥವಾ

b) ಭಾರತ ಸರ್ಕಾರದ ಪ್ರಮಾಣೀಕರಣ ಪ್ರಾಧಿಕಾರಗಳ ನಿಯಂತ್ರಕರಿಂದ ಗುರುತಿಸಲ್ಪಟ್ಟ ಆಧಾರ್ ಆಧಾರಿತ ಇ-ಸಹಿ. ಅಥವಾ

c) ಕರ್ನಾಟಕ ಸರ್ಕಾರವು ಸೂಚಿಸಿದ ಯಾವುದೇ ಇತರ ವಿದ್ಯುನ್ಮಾನ (Electronic) ದೃಢೀಕರಣ ವಿಧಾನ.

(2) ಪ್ರಕರಣದ ಮನವಿಗಳು, ಪ್ರಮಾಣ ಪತ್ರ, ದಾಖಲೆಗಳು, ಪ್ರಕರಣದ ಡೈರಿ ಮತ್ತು ಆದೇಶಗಳ ಸಂಪೂರ್ಣ ದಾಖಲೆಗಳನ್ನೊಳಗೊಂಡಂತೆ ಪ್ರಕರಣದ ಸಂಪೂರ್ಣ ದಾಖಲೆಯನ್ನು RCCMS ನಲ್ಲಿ ನಿರ್ವಹಿಸುವುದು ಮತ್ತು ಸಂರಕ್ಷಿಸುವುದು. ದೃಢೀಕೃತ ಪ್ರತಿಗಳನ್ನು ಪರಿಶೀಲಿಸಬಹುದಾದ ಸುರಕ್ಷಿತ ವಿದ್ಯುನ್ಮಾನ (Electronic) ರೂಪದಲ್ಲಿ ಸೃಜಿಸತಕ್ಕದ್ದು.

(3) ಕಂದಾಯ ನ್ಯಾಯಾಲಯಗಳು RCCMS ನಲ್ಲಿ ನೇರವಾಗಿ ವಿಚಾರಣಾ ದಿನಾಂಕ ನಿಗಧಿಪಡಿಸುವುದು, ನಡವಳಿಗಳ ದಾಖಲೆ ಮತ್ತು ಕಾಸ್‌ಲಿಸ್ಟ್ ಅನ್ನು ವಿದ್ಯುನ್ಮಾನ ಮೂಲಕ ಸೃಜಿಸತಕ್ಕದ್ದು.

(4) ಕಂದಾಯ ನ್ಯಾಯಾಲಯ ಪ್ರಕರಣಗಳ ಮೇಲ್ವಿಚಾರಣಾ ವ್ಯವಸ್ಥೆ (ಆರ್.ಸಿ.ಸಿ.ಎಂ.ಎಸ್) ನಲ್ಲಿ ಆದೇಶಗಳನ್ನು ಡಿಜಿಟಲ್ ಸಹಿ ಮತ್ತು ಅಪಲೋಡ್ ಮಾಡತಕ್ಕದ್ದು. ಆರ್.ಸಿ.ಸಿ.ಎಂ.ಎಸ್ ನಲ್ಲಿ ಸೃಜನೆಗೊಂಡ ಪ್ರತಿಯು ಅಧಿನಿಯಮ ಮತ್ತು ನಿಯಮಗಳಡಿಯಲ್ಲಿ ಪ್ರಮಾಣೀಕೃತ ಪ್ರತಿಯಂತೆ ಪರಿಗಣಿಸತಕ್ಕದ್ದು.

**8. ಸೂಚನಾ ಪತ್ರ ಮತ್ತು ಸಂವಹನವನ್ನು ವಿದ್ಯುನ್ಮಾನದ ಮೂಲಕ ಜಾರಿಗೊಳಿಸುವುದು:**

(1) ಆರ್.ಸಿ.ಸಿ.ಎಂ.ಎಸ್. ವ್ಯವಸ್ಥೆಯ ಮೂಲಕ ಸೂಚನಾ ಪತ್ರ, ಸಮನ್ಸ್ ಮತ್ತು ಸಂವಹನಗಳನ್ನು ವಿದ್ಯುನ್ಮಾನದ ಮೂಲಕ ವಿಳಾಸಗಳಿಗೆ, ಮೊಬೈಲ್ ಸಂಖ್ಯೆಗಳಿಗೆ ಮತ್ತು ಇ-ಮೇಲ್ ಮೂಲಕ ಹಾಗೂ ಲಭ್ಯವಿರುವ ಸ್ವಯಂ ಚಾಲಿತ ಎಸ್.ಎಂಎಸ್/ ಇ-ಮೇಲ್, ವಾಟ್ಸಪ್ ಮುಖಾಂತರ ವಾದಿ-ಪ್ರತಿವಾದಿಗಳಿಗೆ ಜಾರಿಗೊಳಿಸತಕ್ಕದ್ದು. ಆರ್‌ಸಿಸಿಎಂಎಸ್ ಮೂಲಕ ರವಾನಿಸಿದ ಮತ್ತು ವಿತರಿಸಿದ ಪುರಾವೆಯು ಜಾರಿಗೊಳಿಸಿರುವುದಕ್ಕೆ ಸಾಕ್ಷ್ಯವೆಂದು ಮೇಲ್ನೋಟಕ್ಕೆ ಪರಿಗಣಿಸತಕ್ಕದ್ದು.

(2) ವಿದ್ಯುನ್ಮಾನ ಮೂಲಕ ಜಾರಿಗೊಳಿಸುವುದು ಯಶಸ್ವಿಯಾಗದಿದ್ದಲ್ಲಿ, ಕಂದಾಯ ನ್ಯಾಯಾಲಯದ ನಿರ್ದೇಶನದಂತೆ ಪರ್ಯಾಯವಾಗಿ ಜಾರಿಗೊಳಿಸಿರುವುದಕ್ಕೆ ಕೈಗೊಂಡ ಕ್ರಮವನ್ನು ಆರ್‌ಸಿಸಿಎಂಎಸ್ ನಲ್ಲಿ ದಾಖಲಿಸತಕ್ಕದ್ದು.

**9. ಶುಲ್ಕ ಮತ್ತು ಪಾವತಿ:**

(1) ನ್ಯಾಯಾಲಯ ಶುಲ್ಕ ಮತ್ತು ಶಾಸನಬದ್ಧ ಶುಲ್ಕಗಳನ್ನು ಆನ್‌ಲೈನ್ ಮೂಲಕ ಪಾವತಿಸತಕ್ಕದ್ದು ಮತ್ತು ಇ-ಪಾವತಿ ಮತ್ತು ಇ-ಚಲನ್‌ಗಳನ್ನು ಆರ್.ಸಿ.ಸಿಎಂ.ಎಸ್ ನಲ್ಲಿ ಸೃಜಿಸತಕ್ಕದ್ದು.

(2) ಮರು ಪಾವತಿ, ಹೆಚ್ಚುವರಿ ಮತ್ತು ಇತರೆ ಪಾವತಿಗಳನ್ನು ಆರ್.ಸಿ.ಸಿಎಂ.ಎಸ್ ಮೂಲಕ ನಿರ್ವಹಿಸತಕ್ಕದ್ದು.

**10) ಪಾರದರ್ಶಕತೆ ಮತ್ತು ಮುಕ್ತ ಪ್ರವೇಶ:**

1. ದೈನಂದಿನ ಕಾಸ್‌ಲಿಸ್ಟ್ (Cause-list), ಮುಂದಿನ ವಿಚಾರಣಾ ದಿನಾಂಕಗಳು ಮತ್ತು ಅಂತಿಮ ಆದೇಶಗಳನ್ನು ರಹಸ್ಯ ಕಾಪಾಡುವ ನಿರ್ದೇಶನಕ್ಕೊಳಪಟ್ಟು ಆರ್.ಸಿ.ಸಿಎಂ.ಎಸ್ ನಲ್ಲಿ ಪ್ರಕಟಿಸತಕ್ಕದ್ದು.
2. ವಾದಿ-ಪ್ರತಿವಾದಿಗಳು ಪ್ರಕರಣದ ಹಂತವನ್ನು ಆನ್‌ಲೈನ್ ಮೂಲಕ ಪರಿವೀಕ್ಷಿಸಲು ಮತ್ತು ಆದೇಶಗಳನ್ನು ಡೌನ್‌ಲೋಡ್ ಮಾಡಲು ಅವಕಾಶ ಕಲ್ಪಿಸತಕ್ಕದ್ದು.

**11. ಮಾರ್ಗಸೂಚಿಗಳನ್ನು ಹೊರಡಿಸುವ ಅಧಿಕಾರ:**

ಈ ಅಧಿಸೂಚನೆಯ ಅನುಷ್ಠಾನಕ್ಕಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ರವರು ಡಿಜಿಟಲೀಕರಣ, ಆನ್‌ಲೈನ್ ವಿಚಾರಣೆಗಳು ಮತ್ತು ದಾಖಲೆ ನಿರ್ವಹಣೆ ಕಾರ್ಯ ವಿಧಾನಗಳನ್ನು ಒಳಗೊಂಡಂತೆ ವಿವರವಾದ ಮಾರ್ಗಸೂಚಿಗಳನ್ನು ಪ್ರಮಾಣಿತ ಕಾರ್ಯಾಚರಣಾ, ಕಾರ್ಯವಿಧಾನಗಳನ್ನು (SOP) ಮತ್ತು ಕಾಲ ಕಾಲಕ್ಕೆ ಸೂಚನೆಗಳನ್ನು ಹೊರಡಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ರಾಜೇಂದರ್ ಕುಮಾರ್ ಕಟಾರಿಯಾ)**
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಕಂದಾಯ ಇಲಾಖೆ,

**ಇವರಿಗೆ:**
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ-ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವ ಸಲುವಾಗಿ
**ಪ್ರತಿ:**

1) ಪ್ರಧಾನ ಮಹಾಲೇಖಪಾಲರು (G & SSA)/(E &RSA)/(A &E), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು

3) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ) ಬಹುಮಹಡಿಗಳ ಕಟ್ಟಡ, ಬೆಂಗಳೂರು.
4) ಎಲ್ಲಾ ಪ್ರಾದೇಶಿಕ ಆಯುಕ್ತರು
5) ಆಯುಕ್ತರು, ಕಂದಾಯ ಆಯುಕ್ತಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6) ಆಯುಕ್ತರು, ಭೂಮಾಪನ ಮತ್ತು ಭೂದಾಖಲೆಗಳ ಇಲಾಖೆ, ಕೆ.ಆರ್.ಸರ್ಕಲ್, ಬೆಂಗಳೂರು.
7) ಎಲ್ಲಾ ಜಿಲ್ಲಾಧಿಕಾರಿಗಳು (ಕಂದಾಯ ಆಯುಕ್ತರ ಮೂಲಕ)
8) ಎಲ್ಲಾ ಉಪ ವಿಭಾಗಾಧಿಕಾರಿಗಳು (ಕಂದಾಯ ಆಯುಕ್ತರ ಮೂಲಕ)
9) ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಗಳು
10) ಯೋಜನಾ ನಿರ್ದೇಶಕರು (ಭೂಮಿ ಉಸ್ತುವಾರಿ ಕೋಶ) ಕಂದಾಯ ಇಲಾಖೆ ಬೆಂಗಳೂರು.
11) ಎಲ್ಲಾ ತಹಶೀಲ್ದಾರರು (ಕಂದಾಯ ಆಯುಕ್ತರ ಮೂಲಕ)
12) ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಕಂದಾಯ ಇಲಾಖೆ/ವಿಪತ್ತು ನಿರ್ವಹಣೆ, ನೋಂದಣಿ ಮತ್ತು ಮುದ್ರಾಂಕ ಹಾಗೂ ಸಾಮಾಜಿಕ ಭದ್ರತೆ ಇಲಾಖೆ
13) ಎಲ್ಲಾ ಅಪರ/ಜಂಟಿ/ಉಪ ಕಾರ್ಯದರ್ಶಿಗಳು, ಕಂದಾಯ ಇಲಾಖೆ
14) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ

114877/19 892

ಕರ್ನಾಟಕ ಸರ್ಕಾರ

ಸಂಖ್ಯೆ: ಆರ್‌ಡಿ 11 ಟಿಆರ್‌ಎಂ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 21.1.2019

## ಸುತ್ತೋಲೆ

ವಿಷಯ: ಅರೆ ನ್ಯಾಯಿಕ ಪ್ರಕರಣಗಳನ್ನು ಕಂದಾಯ ನ್ಯಾಯಾಲಯಗಳ ಪ್ರಕರಣಗಳ ನಿರ್ವಹಣಾ ವ್ಯವಸ್ಥೆ [RCCMS] ತಂತ್ರಾಂಶದ ಮುಖಾಂತರವೇ ನಿರ್ವಹಿಸುವ ಕುರಿತು ಸೂಚನೆಗಳು.

ಉಲ್ಲೇಖ:
1. ಸರ್ಕಾರದ ಆದೇಶ ಸಂ: ಕಂಇ 152 ಎಲ್‌ಜಿಜಿಡಿ 2016 ದಿನಾಂಕ:04.03.2017.
2. ಸರ್ಕಾರದ ಸುತ್ತೋಲೆ ಸಂ: ಕಂಇ 305 ಎಲ್‌ಜಿಟಿ 2017 ದಿನಾಂಕ:05.05.2018.
3. ಮಾನ್ಯ ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:03.01.2019. ನಡೆದ ಸಭೆಯ ನಡವಳಿ

************

ಜಿಲ್ಲಾಧಿಕಾರಿಗಳ ಕಾರ್ಯಾಲಯ
ಉತ್ತರ ಕನ್ನಡ ಜಿಲ್ಲೆ ಕಾರವಾರ
ದಿನಾಂಕ 29 JAN 2015

ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ಮತ್ತು ಇತರೆ ಕಾಯ್ದೆಗಳಡಿಯಲ್ಲಿ ಜಿಲ್ಲಾಧಿಕಾರಿ / ಉಪವಿಭಾಗಾಧಿಕಾರಿ / ತಹಶೀಲ್ದಾರ್ ನ್ಯಾಯಾಲಯಗಳಲ್ಲಿ ದಾಖಲಾಗುವ ಅರ್ಜಿಗಳು / ಮೇಲ್ಮನವಿ ಪ್ರಕರಣಗಳು ಅರೆನ್ಯಾಯಿಕ ಪ್ರಕರಣಗಳಾಗಿರುತ್ತವೆ. ಸಂಬಂಧಪಟ್ಟ ಪ್ರಾಧಿಕಾರಗಳು ಅರೆನ್ಯಾಯಿಕ ಪ್ರಕರಣಗಳನ್ನು ಇತ್ಯರ್ಥಪಡಿಸುವಲ್ಲಿ ವಿಳಂಬ ಉಂಟಾಗುತ್ತಿರುವುದನ್ನು ಸರ್ಕಾರ ಗಮನಿಸಿ, ಪ್ರಕರಣಗಳನ್ನು ತ್ವರಿತಗತಿಯಲ್ಲಿ ವಿಲೇವಾರಿ ಮಾಡುವ ಹಿತದೃಷ್ಟಿಯಿಂದ ಎನ್.ಐ.ಸಿ ಸಹಯೋಗದೊಂದಿಗೆ Revenue Court Case Monitoring System [RCCMS] ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ಜಾರಿಗೊಳಿಸಲಾಗಿದೆ. RCCMS ತಂತ್ರಾಂಶವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಉಲ್ಲೇಖ (1)ರ ಆದೇಶದಲ್ಲಿ ಜಿಲ್ಲಾಮಟ್ಟ / ವಿಭಾಗಮಟ್ಟ / ತಾಲ್ಲೂಕು ಮಟ್ಟದ ಪರಿಶೀಲನಾ ಸಮಿತಿಯನ್ನು ರಚಿಸಿ, ಅಗತ್ಯ ಸೂಚನೆಗಳನ್ನು ನೀಡಲಾಗಿರುತ್ತದೆ. ಜಿಲ್ಲಾಧಿಕಾರಿಗಳ/ಉಪವಿಭಾಗಾಧಿಕಾರಿಗಳ/ತಹಶೀಲ್ದಾರರ ನ್ಯಾಯಾಲಯಗಳಲ್ಲಿ ದಾಖಲಾಗಿರುವ ಅರೆ ನ್ಯಾಯಿಕ ಅರ್ಜಿಗಳು/ಮೇಲ್ಮನವಿ ಪ್ರಕರಣಗಳನ್ನು ಕಾಲಮಿತಿಯೊಳಗೆ ವಿಲೇವಾರಿ ಮಾಡುವ ಹಾಗೂ ಈ ಸಂಬಂಧ ಕ್ರಮಬದ್ಧವಾದ Speaking ಆದೇಶ ಹೊರಡಿಸುವ ಕುರಿತು ಉಲ್ಲೇಖ(2)ರ ಸುತ್ತೋಲೆಯಲ್ಲಿ ವಿವರವಾದ ಸೂಚನೆಗಳನ್ನು ನೀಡಲಾಗಿದೆ

ದಿನಾಂಕ:04.12.2019ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳು ಮತ್ತು ತಹಶೀಲ್ದಾರರು ಹಾಗೂ ಅವರ ಕಚೇರಿಗಳ ನ್ಯಾಯಾಲಯ ಪ್ರಕರಣಗಳ ವಿಷಯ ನಿರ್ವಾಹಕರೊಂದಿಗೆ ನಡೆದ ವಿಡಿಯೋ ಸಂವಾದದಲ್ಲಿ ಈ ತಂತ್ರಾಂಶದ ಬಗ್ಗೆ ಅಗತ್ಯ ಸೂಚನೆಗಳನ್ನು ನೀಡಲಾಗಿದೆ. ಎಲ್ಲಾ ಅರೆನ್ಯಾಯಿಕ ಪ್ರಕರಣಗಳನ್ನು ಈ ತಂತ್ರಾಂಶದ ಮುಖಾಂತರವೇ ನಿರ್ವಹಿಸಲು ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲಾಗಿರುತ್ತದೆ.

ಮುಂದುವರೆದು, ಅರೆನ್ಯಾಯಿಕ ಪ್ರಕರಣಗಳನ್ನು RCCMS ತಂತ್ರಾಂಶದ ಮುಖಾಂತರ ಪರಿಣಾಮಕಾರಿಯಾಗಿ ನಿರ್ವಹಿಸಲು ನ್ಯಾಯಾಲಯ ಪ್ರಕರಣಗಳ ಪರಾಮರ್ಶೆ ಸಮಿತಿಗೆ ಸೂಕ್ತ ಸೂಚನೆಗಳನ್ನು ನೀಡುವಂತೆ ದಿನಾಂಕ: 03.01.2019ರಂದು ಮಾನ್ಯ ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನಿರ್ಣಯಿಸಲಾಗಿದೆ. ಆದ್ದರಿಂದ ಅರೆನ್ಯಾಯಿಕ ಪ್ರಕರಣಗಳನ್ನು RCCMS ತಂತ್ರಾಂಶದ ಮುಖಾಂತರ ನಿರ್ವಹಿಸಲು ಈ ಕೆಳಕಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.

1. ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ಮತ್ತು ಇತರೆ ಕಾಯ್ದೆಗಳಡಿಯಲ್ಲಿ ಜಿಲ್ಲಾಧಿಕಾರಿ / ಉಪವಿಭಾಗಾಧಿಕಾರಿ / ತಹಶೀಲ್ದಾರ್ ನ್ಯಾಯಾಲಯಗಳಲ್ಲಿ ದಾಖಲಾಗುವ ಅರ್ಜಿಗಳು / ಮೇಲ್ಮನವಿ ಪ್ರಕರಣಗಳನ್ನು RCCMS ತಂತ್ರಾಂಶದಲ್ಲಿ ದಾಖಲಿಸಿಯೇ ನಿರ್ವಹಿಸತಕ್ಕದ್ದು.
2. RCCMS ತಂತ್ರಾಂಶ ನಿರ್ವಹಣೆಯ ಬಗ್ಗೆ ಜಿಲ್ಲೆಯಲ್ಲಿ ಅರೆ ನ್ಯಾಯಿಕ ಪ್ರಕರಣ ನಿರ್ವಹಿಸುವ ಎಲ್ಲಾ ಅಧ್ಯಕ್ಷಾಧಿಕಾರಿಗಳು ಮತ್ತು ಸಂಬಂಧಪಟ್ಟ ವಿಷಯ ನಿರ್ವಾಹಕರಿಗೆ NIC ಅಧಿಕಾರಿಯವರಿಂದ ಕಡ್ಡಾಯವಾಗಿ ಈ ಸಂಬಂಧವಾಗಿ ತರಬೇತಿ ನೀಡುವುದು
3. RCCMS ತಂತ್ರಾಂಶ ಜಾರಿಗೆ ಬರುವ ಮೊದಲು ದಾಖಲಾಗಿ ಬಾಕಿ ಇರುವ ಅರೆ ನ್ಯಾಯಿಕ ಪ್ರಕರಣಗಳನ್ನು RCCMS ತಂತ್ರಾಂಶದಲ್ಲಿ ನಮೂದಿಸಿ. ನಿರ್ವಹಿಸತಕ್ಕದ್ದು
4. RCCMS ತಂತ್ರಾಂಶದಲ್ಲಿ ಅರ್ಜಿ / ಮೇಲ್ಮನವಿ ಪ್ರತಿಗಳನ್ನು (Plaint Copy) upload ಮಾಡುವುದು; ಪ್ರಕರಣಗಳನ್ನು ಸ್ವೀಕೃತಿ ಆಧಾರದಲ್ಲಿ ಜ್ಯೇಷ್ಠತೆ ಮೇಲೆ ನಿರ್ವಹಿಸುವುದು; ನಿಗದಿತ ದಿನಾಂಕದಂದು ವಿಚಾರಣೆ ನಡೆಸಿದ ನಂತರ ಮುಂದೂಡಿದ ದಿನಾಂಕವನ್ನು ತಂತ್ರಾಂಶದಲ್ಲಿ ದಾಖಲಿಸುವುದು; ಆದೇಶಕ್ಕೆ ಮುಂದೂಡಿದಲ್ಲಿ ದಿನಾಂಕ ನಮೂದಿಸುವುದು ಮತ್ತು ಆದೇಶವಾದ ದಿನದಂದೇ ಆದೇಶದ ಪ್ರತಿಯನ್ನು upload ಮಾಡುವುದು
5. ಆದೇಶ ಘೋಷಣೆ ಆದ ನಂತರ ಭೂಮಿ ತಂತ್ರಾಂಶದಲ್ಲಿ ಮ್ಯುಟೇಷನ್‌ನ ಅವಶ್ಯಕತೆ ಇದ್ದಲ್ಲಿ ಆದೇಶವಾದ ದಿನಾಂಕದ ಎರಡು ದಿನಗಳ ಒಳಗಾಗಿ ಸದರಿ ತಂತ್ರಾಂಶದಲ್ಲಿ ದಾಖಲಿಸಿ Biometric Authentication ಅನ್ನು ಅಧ್ಯಕ್ಷಾಧಿಕಾರಿಗಳು ನೀಡತಕ್ಕದ್ದು

ಜಿಲ್ಲಾಮಟ್ಟ / ವಿಭಾಗಮಟ್ಟ / ತಾಲ್ಲೂಕು ಮಟ್ಟದ ಪರಿಶೀಲನಾ ಸಮಿತಿಗಳು ಪ್ರತಿ ಶನಿವಾರ ಸಭೆಯನ್ನು ನಡೆಸಿ RCCMS ತಂತ್ರಾಂಶದ ಅನುಷ್ಠಾನದ ಪ್ರಗತಿಯನ್ನು ಪರಿಶೀಲಿಸುವುದು

ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ತಮ್ಮ ಜಿಲ್ಲೆಯ ಎಲ್ಲಾ ಹಂತಗಳಲ್ಲಿ RCCMS ತಂತ್ರಾಂಶವನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುತ್ತಿರುವ ಬಗ್ಗೆ ಪ್ರತಿ ಮಾಹೆಯ ಕಂದಾಯ ಅಧಿಕಾರಿಗಳ ಸಭೆಯಲ್ಲಿ ಒಂದು ಅಜೆಂಡವನ್ನಾಗಿ ತೆಗೆದುಕೊಂಡು ಪರಾಮರ್ಶಿಸತಕ್ಕದ್ದು ಮತ್ತು ಎಲ್ಲಾ ಅರೆ ನ್ಯಾಯಿಕ ಪ್ರಕರಣಗಳನ್ನು ಪಾರದರ್ಶಕವಾಗಿ ನಿರ್ವಹಿಸಲಾಗುತ್ತಿದೆ ಎಂಬುದನ್ನು ಖಾತ್ರಿಪಡಿಸಿಕೊಳ್ಳುವುದು

೮ ಸಂಬಂಧಪಟ್ಟ ಉಪವಿಭಾಗಾಧಿಕಾರಿಗಳು ತಮ್ಮ ಉಪವಿಭಾಗದಲ್ಲಿ ಎಲ್ಲಾ ಹಂತಗಳಲ್ಲಿ RCCMS ತಂತ್ರಾಂಶವನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುತ್ತಿರುವ ಬಗ್ಗೆ ಪ್ರತಿ ಮಾಹೆಯ ಕಂದಾಯ ಅಧಿಕಾರಿಗಳ ಸಭೆಯಲ್ಲಿ ಅಜೆಂಡಾವನ್ನಾಗಿ ತೆಗೆದುಕೊಂಡು ಪರಾಮರ್ಶಿಸತಕ್ಕದ್ದು

೯ RCCMS ತಂತ್ರಾಂಶ ನಿರ್ವಹಣೆಯಲ್ಲಿ ಯಾವುದೇ ಸಮಸ್ಯೆಗಳಿದ್ದಲ್ಲಿ ಸಂಬಂಧಿಸಿದ DIO, NIC ರವರನ್ನು ಸಂಪರ್ಕಿಸಿ ಪರಿಹರಿಸಿಕೊಳ್ಳತಕ್ಕದ್ದು

(ಟಿ. [illegible])
ಸರ್ಕಾರದ ಉಪ ಕಾರ್ಯದರ್ಶಿ
ಕಂದಾಯ ಇಲಾಖೆ(ಭೂ.ಮಂ&ಭೂ.ಸು)

ಇವರಿಗೆ:

1. ಪ್ರಾದೇಶಿಕ ಆಯುಕ್ತರು- ಬೆಂಗಳೂರು / ಮೈಸೂರು / ಕಲ್ಬುರ್ಗಿ / ಬೆಳಗಾವಿ.
2. ಎಲ್ಲಾ ಜಿಲ್ಲಾಧಿಕಾರಿಗಳು
3. ಎಲ್ಲಾ ಜಿಲ್ಲೆಗಳ ಉಪವಿಭಾಗಾಧಿಕಾರಿಗಳು (ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಮುಖಾಂತರ)
4. ಎಲ್ಲಾ ತಹಶೀಲ್ದಾರರುಗಳು (ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಮುಖಾಂತರ).
5. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು

ಪ್ರತಿ ಮಾಹಿತಿಗಾಗಿ:-

1. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ